॥ ಓಂ ನಾದಬ್ರಹ್ಮಣೇ ನಮಃ ॥

ಸಂಗೀತಾಚಾರ್ಯ

MUSIC-MASTER

(ಪ್ರಥಮ ಭಾಗ)

ಲೇಖಕರು:

ಎಸ್. ಎನ್. ಹರಿದಾಸ.

ಪ್ರಕಾಶಕರು:

ಸಂಗೀತ ಕಲಾ ಮಂದಿರ, ಮೂಲ್ಕಿ.

ಮುದ್ರಕರು:

ಮಂಗಳೂರು ಪ್ರೆಸ್, ಮಂಗಳೂರು.

1937

ಬೆಲೆ: ೦—೧೦—೦.

PREFACE

I have been asked to write a preface to this book entitled "The Music Master" just about to be published by Mr. S. N. Haridas. I possess no special qualifications for this honour and my only excuse for accepting it is that I have been an ardent lover and a keen devotee of Hindustani music. From a very long time Hindustani music has been a sealed book to the Kanarese knowing public and there have been few publications in Kanarese either to describe its theory or to unravel the mysteries and intricacies of its practical application. I have often witnessed and have often been myself perplexed by the repeated requests of the audience to sing Kanarese songs. For the dearth of classic compositions in the Kanarese language adapted to Hindustani Ragas is most striking. This book however is an attempt to supply the above need for light compositions in pure Hindustani Ragas. The book gives an elementary theory of Hindustani Music and contains Kanarese songs in 20 popular Ragas. The beginner will find the book very useful and instructive; but it must be stated that no book on Music can independently take the place of a teacher; it can only act as a guide and serve to refresh the memory.

"Dheen Villa"
Hensman Rd.,
New Mambalam,
Madras.

N. M. Adyanthaya.



ಪೀಠಿಕೆ.

ಶ್ರೀ। ಎಸ್. ಎನ್. ಹರಿದಾಸರು ಪ್ರಕಟಿಸಲಿಕ್ಕಿರುವ "ಸಂಗೀತಾಚಾರ್ಯ"ವೆಂಬ ಪುಸ್ತಕಕ್ಕೆ ಒಂದು ಪೀಠಿಕೆಯನ್ನು ಬರೆಯಬೇಕೆಂದು ನನ್ನನ್ನು ಕೇಳಿರುವರು. ಈ ಗೌರವವನ್ನು ಪಡೆಯಲು ನನ್ನಲ್ಲೇನೂ ವಿಶೇಷ ಯೋಗ್ಯತೆಯಿಲ್ಲ. ಆದರೆ ಹಿಂದುಸ್ಥಾನಿ ಗಾಯನದ ಉತ್ಸುಕ ಭಕ್ತನಾದುದರಿಂದಲೂ ಅದನ್ನು ಆತುರತೆಯಿಂದ ಪ್ರೀತಿಸುವವನಾದುದರಿಂದಲೂ ನಾನು ಒಪ್ಪಿರುವೆನು. ಬಹಳ ಸಮಯದಿಂದಲೂ ಕನ್ನಡಿಗರಿಗೆ ಹಿಂದುಸ್ಥಾನಿ ಗಾಯನವು ಗೂಢವಾದ ವಿಷಯವಾಗಿದ್ದಿತು. ಅಲ್ಲದೆ, ಅದರ ಶಾಸ್ತ್ರವನ್ನು ವರ್ಣಿಸಿಯಾಗಲಿ ಪ್ರಯೋಗದ ಉಪಯುಕ್ತತೆಯ ವಿಷಯವಾಗಲೀ ಕೆಲವೇ ಪುಸ್ತಕಗಳು ಕನ್ನಡದಲ್ಲಿ ಇಷ್ಟರ ವರೆಗೆ ಪ್ರಕಟವಾಗಿವೆ. ಅನೇಕ ಸಲ ಸಭೆಗಳಲ್ಲಿ ಜನರು ಕನ್ನಡ ಹಾಡುಗಳನ್ನು ಹಾಡಲು ನನಗೂ ಇತರರಿಗೂ ವಿನಂತಿಸಿದುದನ್ನು ಕಂಡು ಗಾಬರಿಗೊಂಡಿದ್ದೇನೆ. ಕನ್ನಡ ಭಾಷೆಯಲ್ಲಿ ಶ್ರೇಷ್ಠ ತರಗತಿಯ ರಚನೆಗಳನ್ನು ಹಿಂದುಸ್ಥಾನಿ ರಾಗಗಳಲ್ಲಿ ಹಾಡುವುದು ಬಹಳ ಚಮತ್ಕಾರಿಕವಾದುದು. ಅಂತೆಯೇ ಈ ಪುಸ್ತಕವು ಶುದ್ಧವಾದ ಹಿಂದುಸ್ಥಾನಿ ರಾಗಗಳಲ್ಲಿ ಈ ಮೇಲಿನ ವಿಷಯಗಳನ್ನೊದಗಿಸಿ ಕೊಡುವುದಕ್ಕಾಗಿ ಮಾಡಿದ ಒಂದು ಪ್ರಯತ್ನ. ಹಿಂದುಸ್ಥಾನಿ ಗಾಯನದ ಪ್ರಾಥಮಿಕ ಜ್ಞಾನವನ್ನು ಇದು ಕೊಡುವುದು. ಇದರಲ್ಲಿ ೨೦ ಸಾಮಾನ್ಯ ರಾಗಗಳಲ್ಲಿ ಕನ್ನಡ ಹಾಡುಗಳಿವೆ. ಕಲಿಯುವವರಿಗೆ ಈ ಪುಸ್ತಕವು ಒಳ್ಳೇ ಪ್ರಯೋಜನಕಾರಿಯೂ ಬೋಧಕವೂ ಆಗಿರುವುದು. ಆದರೆ ಗಾಯನದಲ್ಲಿ ಯಾವ ಪುಸ್ತಕವಾದರೂ ತನ್ನಷ್ಟಕ್ಕೇ ಒಬ್ಬ ಗುರುವಿನ ಸ್ಥಾನದಲ್ಲಿರಲಾರದು ಎಂಬುದನ್ನು ಗಮನಿಸತಕ್ಕ ವಿಷಯವಾಗಿದೆ. ಅದು ಸಹಾಯಕಾರಿಯಾಗಿ ಜ್ಞಾಪಕ ಶಕ್ತಿಯನ್ನು ಚೇತನಗೊಳಿಸುವುದು

"ಧೀನ್ ವಿಲ್ಲಾ"
ಹೆನ್ಸ್‌ಮೆನ್ ರೋಡ್,
ಮದ್ರಾಸು

ಎನ್. ಎಮ್. ಅಡ್ಯಂತಾಯ.

ಸಂಗೀತಾಚಾರ್ಯ—



ಗ್ರಂಥಕರ್ತ

ಮುನ್ನುಡಿ

ಸಂಗೀತ ಸಾಹಿತ್ಯಕ್ಷೇತ್ರದಲ್ಲಿ ಇದೊಂದು ಸಣ್ಣ ಪುಸ್ತಕವು ಅರ್ಪಿತವಾಗಿದೆ. ಕರ್ನಾಟಕದಲ್ಲಿ ಉತ್ತರಾದಿ (ಹಿಂದುಸ್ಥಾನಿ) ಸಂಗೀತವು ಬಹಳವಾಗಿ ಪ್ರಚಾರ ದಲ್ಲಿರುವುದಾದರೂ, ಅದರ ಜ್ಞಾನಾಭಿವೃದ್ಧಿಗೆ ಬೇಕಾಗುವ ಸಾಹಿತ್ಯ ಪುಸ್ತಕಗಳು ಕನ್ನಡ ಭಾಷೆಯಲ್ಲಿ ತೀರಾ ವಿರಳವು.

ಅಂತೆಯೇ ಈ ಪುಸ್ತಕವು ಪ್ರಾಥಮಿಕ ಸಂಗೀತವನ್ನು ಕಲಿಯುವವರ ಅನು ಕೂಲಾರ್ಥವಾಗಿ ಬರೆಯಲ್ಪಟ್ಟಿದೆ. ಇದರಲ್ಲಿರುವ ಪದಗಳೆಲ್ಲವೂ ಕನ್ನಡ ಭಾಷೆ ಯಲ್ಲಿರುವುದಲ್ಲದೆ, ಹೇಗಾಗಿ ರೂಢಿಯಲ್ಲಿರುವ ಪದಗಳ ಧಾಟಿಯನ್ನೇ ಅನುಸರಿ ಸಿರುವುದರಿಂದ ಇದು ಸಂಗೀತ ವಿದ್ಯಾರ್ಥಿಗಳಿಗೆ ಹೆಚ್ಚಿನ ಉಪಯೋಗಿಯಾದೀತೆಂಬ ಭರವಸೆ.

ಈ ಪುಸ್ತಕದಲ್ಲಿ ಕೊಟ್ಟಿರುವ ಪ್ರತಿಯೊಂದು ರಾಗಕ್ಕೂ ಸಮಾನವಾದ ದಕ್ಷಿಣಾದಿ ರಾಗಗಳ ಒಂದೊಂದು ಕೃತಿಯನ್ನೂ ಸೇರಿಸಬೇಕೆಂದಿದ್ದರೂ ಕಾರಣಾಂತರ ಗಳಿಂದ ಆ ವಿಚಾರವನ್ನು ದ್ವಿತೀಯ ಭಾಗಕ್ಕೆ ಮುಂದರಿಸಬೇಕಾಯಿತು.

ನನ್ನ ಪ್ರಾರ್ಥನೆಯಂತೆ ಈ ಪುಸ್ತಕಕ್ಕೆ ಅಚ್ಚುಕಟ್ಟಾದ ಮುನ್ನುಡಿ ಯೊಂದನ್ನು ಬರೆದು ಹೆಚ್ಚಿನ ಕಳೆಯೇರುವಂತೆ ಮಾಡಿದ ಮದ್ರಾಸಿನ ರೇಡಿಯೋ ಗಾಯಕರಾದ, ಶ್ರೀಮಾನ್ ಎನ್. ಮಹಾಲಿಂಗ ಅಧ್ಯಂತಾಯ ಬಿ. ಎಸ್.ಸಿ. ರವರಿಗೂ, ಅಚ್ಚುನೊಚ್ಚಾಗಿ ಅಚ್ಚುಗೊಳಿಸಿ ಹೆಚ್ಚಿನ ಸಹಾಯವನ್ನು ಮಾಡಿದ ಮಂಗಳೂರು ಪ್ರೆಸ್ಸಿನವರಿಗೂ ನಾನು ತುಂಬಾ ಕೃತಜ್ಞನಾಗಿದ್ದೇನೆ.

—ಗ್ರಂಥಕರ್ತ.



ವಿಷಯ ಸೂಚಿಕೆ.

ಪದ್ಯ ಸಂಗ್ರಹ

ಇತರ ಪದಗಳು



ನಾದಬ್ರಹ್ಮಣೇ ನಮಃ

ಸಂಗೀತಾಚಾರ್ಯ

ಸ್ವರೋತ್ಪತ್ತಿ

ಮೂಲಭೂತವಾದ ಓಂಕಾರ ಧ್ವನಿಯಿಂದ ನಾದವುತ್ಪನ್ನವಾಗುವುದು. ಅಲ್ಲದೆ, ಆತ್ಮವು ಮನಸ್ಸನ್ನು ಪ್ರೇರೇಪಿಸುವುದರಿಂದ ಅದು ಅಗ್ನಿಗೂ ಅಗ್ನಿಯು ವಾಯುವಿಗೂ ಸೂಚಿಸುವುದು. ಹೀಗೆ ಆತ್ಮ, ಮನಸ್ಸು, ಅಗ್ನಿ, ವಾಯು ಈ ನಾಲ್ಕೂ ಕಾರಣಭೂತವಾಗಿ ನಾದವುತ್ಪನ್ನವಾಗುವುದೆಂದೂ ಪ್ರತೀತಿ ಇದೆ.

ನಾದದಲ್ಲಿ ಅನಾಹತ ಮತ್ತು ಆಹತವೆಂಬ ಎರಡು ಭೇದಗಳಿವೆ. ಯಾವ ನಾದವು ಅಂತರಾತ್ಮ (ಜ್ಞಾನೇಂದ್ರಿಯ)ನಿಗೆ ಮಾತ್ರ ಕೇಳಲ್ಪಡುವುದೋ ಅದು ಅನಾಹತವೆಂದೂ, ಯಾವುದು ಬಹಿರಂಗ (ಕರ್ಣೇಂದ್ರಿಯ)ಕ್ಕೆ ಕೇಳಲ್ಪಡುವುದೋ ಅದು ಆಹತವೆಂದೂ ಹೇಳಲ್ಪಡುವುದು.

ಕಂಪನವಿಲ್ಲದೆ ದೀರ್ಘಕಾಲ ಒಂದೇ ಪ್ರಕಾರವಾಗಿ ಪ್ರತಿಧ್ವನಿಸುವ ಮತ್ತು ಕರ್ಣೇಂದ್ರಿಯಗಳಿಗೆ ಸಂತೋಷವನ್ನುಂಟುಮಾಡುವ ನಾದವನ್ನು ಅನುರಣನಾತ್ಮಕ ಅಥವಾ ಸ್ವರವೆಂದು ಹೇಳುತ್ತಾರೆ. ಅದೇ ಆಹತ ಅಥವಾ ಸ್ಥೂಲನಾದವು.

ಮೂಲತಃ ಏಳು ಸ್ವರಗಳಿವೆ. ಅವುಗಳು–ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾಧ ಎಂಬ ಹೆಸರಿನಿಂದ

ಪ್ರಸಿದ್ಧವಾಗಿವೆ. ಇವುಗಳಿಗನುಕ್ರಮವಾಗಿ ಸ, ರಿ (ರಿ), ಗ, ಮ, ಪ, ಧ, ನಿ ಎಂಬ ಸಾಂಕೇತಿಕ ಹೆಸರುಗಳು ವ್ಯವಹಾರದಲ್ಲಿವೆ. ಸಂಗೀತೋತ್ಪತ್ತಿಗೆ ಈ ಸಪ್ತ ಸ್ವರಗಳೇ ಮೂಲಸ್ಥಾನವು.

ಸ್ವರಭೇದಗಳು

ಈ ಏಳು ಸ್ವರಗಳು **ಅವಿಕಾರಿ** (ಅವಿಕೃತ, ಅಚಲ) ಮತ್ತು **ವಿಕಾರಿ** (ವಿಕೃತ, ಚಲ) ಎಂಬ ಭೇದಗಳನ್ನೊಳಗೊಂಡಿವೆ. ಸಪ್ತ ಸ್ವರಗಳಲ್ಲಿ ಷಡ್ಜ ಮತ್ತು ಪಂಚಮವು ಅವಿಕಾರಿಗಳು. ಉಳಿದೈದು ಸ್ವರಗಳಲ್ಲಿ ಕೋಮಲ, ಶುದ್ಧ, ತೀವ್ರ ಎಂಬ ವಿಕಾರಗಳಿವೆ. ಅವುಗಳನ್ನು ಕೆಳಗಿನ ತಖ್ತೆಯಲ್ಲಿ ವಿವರವಾಗಿ ಕೊಡಲ್ಪಟ್ಟಿದೆ.

ಸ್ವರಗಳು	ಸ	ರಿ	ರಿ	ಗ	ಗ	ಮ	ಮ	ಪ	ಧ	ಧ	ನಿ	ನಿ		
ಅವಿಕಾರಿ	+							+					೨	೧೨
ಕೋಮಲ		+		+					+		+		೪	
ಶುದ್ಧ			+		+	+				+		+	೫	
ತೀವ್ರ							+						೧	

ಹೀಗೆ ಎರಡು ಅಚಲ ಸ್ವರಗಳು, ನಾಲ್ಕು ಕೋಮಲ, ಐದು ಶುದ್ಧ, ಒಂದು ತೀವ್ರ ಸ್ವರ ಕೂಡಿ ಹನ್ನೆರಡು ಸ್ವರಗಳಾದವು. ಕೆಲವರು ಮಧ್ಯಮವನ್ನುಳಿದು, ಶುದ್ಧ ಸ್ವರಗಳೆಲ್ಲವನ್ನೂ ತೀವ್ರ ಸ್ವರಗಳನ್ನಾಗಿ ಪರಿಗಣಿಸುತ್ತಾರೆ. ಆದರ ವಿವರವನ್ನೂ ಕೆಳಗೆ ಕೊಟ್ಟಿದೆ.

ಸ್ವರಗಳು	ಸ	ರಿ	ರಿ	ಗ	ಗ	ಮ	ಮ	ಪ	ಧ	ಧ	ನಿ	ನಿ		
ಅವಿಕಾರಿ	+							+					೨	೧೨
ಕೋಮಲ		+		+		+			+		+		೫	
ಶುದ್ಧ (ತೀವ್ರ)			+		+		+			+		+	೫	

ಹಾಗಿದ್ದರೂ ಹನ್ನೆರಡೇ ಸ್ವರಗಳಾಗುವವು ಇದು ಉತ್ತರಾದಿ (ಹಿಂದುಸ್ತಾನಿ) ಕ್ರಮವು.

ದಕ್ಷಿಣಾದಿ (ಕರ್ನಾಟಕಿ) ರೀತ್ಯಾ, ಷಡ್ಜ ಮತ್ತು ಪಂಚಮಗಳು ಅವಿಕಾರಿಗಳೇ ಆಗಿದ್ದರೂ ಉಳಿದವುಗಳು ಶುದ್ಧ, ಚತುಶ್ರುತಿ, ಷಟ್ಶ್ರುತಿ, ಸಾಧಾರಣ, ಅಂತರ, ಪ್ರತಿ, ಕೈಶಿಕಿ, ಕಾಕಲಿ ಎಂಬ ಎಂಟು ಭೇದಗಳಿಂದ ಪ್ರಸಿದ್ಧವಾಗಿವೆ. ಹೇಗೆಂದರೆ:—

ಸ್ವರಗಳು	ಸ	ರಿ	ರಿ	ರಿ	ಗ	ಗ	ಗ	ಮ	ಮ	ಪ	ಧ	ಧ	ಧ	ನಿ	ನಿ	ನಿ	
ಅವಿಕಾರಿ	+									+							೨
ಶುದ್ಧ		+			+			+			+			+			೫
ಚತುಶ್ರುತಿ			+									+					೨
ಷಟ್ಶ್ರುತಿ				+									+				೨
ಸಾಧಾರಣ						+											೧
ಅಂತರ							+										೧
ಪ್ರತಿ									+								೧
ಕೈಶಿಕಿ															+		೧
ಕಾಕಲಿ																+	೧
																	೧೬

ಹೀಗೆ ಹದಿನಾರು ಸ್ವರಗಳಾದರೂ ವಾಡಿಕೆಯಲ್ಲಿ ಮಾತ್ರ ಕೆಳಗೆ ಕೊಟ್ಟಂತೆ ಹನ್ನೆರಡೇ ಸ್ವರಗಳಿರುತ್ತವೆ.

ಜಾತಿಗಳು	ಪ್ರಕೃತಿ	ಶುದ್ಧ	ಚತುಶ್ರುತಿ	ಶುದ್ಧ	ಷಟ್ಶ್ರುತಿ	ಸಾಧಾರಣ	ಅಂತರ	ಶುದ್ಧ	ಪ್ರತಿ	ಪ್ರಕೃತಿ	ಶುದ್ಧ	ಚತುಶ್ರುತಿ	ಶುದ್ಧ	ಷಟ್ಶ್ರುತಿ	ಕೈಶಿಕಿ	ಕಾಕಲಿ
ಸ್ವರಗಳು	ಸ	ರಿ೧	ರಿ೨	ಗ೧	ರಿ೩	ಗ೨	ಗ೩	ಮ೧	ಮ೨	ಪ	ಧ೧	ಧ೨	ನಿ೧	ಧ೩	ನಿ೨	ನಿ೩
ಕ್ರಮ ಸಂಖ್ಯೆ	೧	೨	೩		೪		೫	೬	೭	೮	೯	೧೦		೧೧		೧೨

ಚತುಶ್ರುತಿ ಋಷಭ ಮತ್ತು ಶುದ್ಧಗಾಂಧಾರ, ಷಟ್ಶ್ರುತಿ ಋಷಭ ಮತ್ತು ಸಾಧಾರಣ ಗಾಂಧಾರ, ಚತುಶ್ರುತಿ ಧೈವತ ಮತ್ತು ಶುದ್ಧ ನಿಷಾದ, ಷಟ್ಶ್ರುತಿ ಧೈವತ ಮತ್ತು ಕಾಕಲಿ ನಿಷಾದ ಇವುಗಳು ಏಕಸ್ಥಾನಿಗಳಾದುದರಿಂದ ಅವುಗಳನ್ನು ಮೇಲಿನ ರೀತಿ ವಿಭಾಗಿಸಿ ವಾಡಿಕೆಯಲ್ಲಿ ಹನ್ನೆರಡೇ ಸ್ವರ ಭೇದಗಳೆಂದು ಪರಿಗಣಿಸುತ್ತಾರೆ.

ಸ್ಥಾಯಿ

ಮೇಲೆ ವಿವರಿಸಿದ ಹನ್ನೆರಡು ಸ್ವರಗಳ ಜೋಡಣೆಗೆ ಒಂದು ಸ್ಥಾಯಿ ಎಂದು ಹೆಸರು. ಅಲ್ಲದೆ ಅದರಲ್ಲಿ ಮೂಲ ಸ್ವರಗಳು ಏಳು ಅಡಕವಾಗಿರುವುದರಿಂದ ಅವುಗಳನ್ನೇ ಪ್ರಾಮುಖ್ಯವನ್ನಾಗಿಟ್ಟು ಕೊಂಡು ಅದನ್ನು ಸಪ್ತಕವೆಂದೂ ಕೆಲವರು ಹೇಳುತ್ತಾರೆ. ಮೂಲತಃ ಮೂರು ಸ್ಥಾಯಿಗಳಿರುತ್ತವೆ. ಅವುಗಳಿಗೆ ಮಂದ್ರ, ಮಧ್ಯ, ತಾರ ಎಂಬ ಹೆಸರು. ನಾದವು ಸ್ಥಾಯಿಗಳಿಗನುಗುಣವಾಗಿ ಹೃದಯದಿಂದ ಹುಟ್ಟುವುದು ಮಂದ್ರವೆಂದೂ, ಕಂಠದಿಂದ ಹುಟ್ಟುವುದು ಮಧ್ಯವೆಂದೂ ಶಿರದಿಂದುತ್ಪನ್ನವಾಗುವುದು ತಾರವೆಂದೂ ಹೇಳಲ್ಪಡುವುದು. ಸಂಗೀತಾರಂಭವು ಸ್ವಾಭಾವಿಕವಾಗಿ ಮಧ್ಯ ಸ್ಥಾಯಿಯಿಂದಾಗುವುದು.

ಪ್ರಾಯಶಃ ಹಾರ್ಮೋನಿಯಂನಲ್ಲಿ ಮೂರು ಸಪ್ತಕಗಳಿರುತ್ತವೆ. ಅವುಗಳ ಸ್ವರಗಳನ್ನು ಕಂಡುಹಿಡಿಯುವ ಕ್ರಮವು ಮುಂದೆ ಕೊಡಲ್ಪಟ್ಟಿದೆ.

ರಾಗ

ರಾಗ ರಚನೆಯು ಆರೋಹ, ಅವರೋಹದಿಂದ ಕೂಡಿದೆ. ವ್ಯವಸ್ಥಿತ ಸ್ವರಗಳನ್ನು ಮೇಲೆ ಕೊಂಡುಹೋಗುವುದು ಆರೋಹವೆಂತಲೂ ಕೆಳತರುವುದು ಅವರೋಹವೆಂತಲೂ ಹೇಳುತ್ತಾರೆ.

ಉದಾ:— ಆರೋಹ— ಸ ರಿ ಗ ಮ ಪ ಧ ನಿ ಸ
ಅವರೋಹ—ಸ ನಿ ಧ ಪ ಮ ಗ ರಿ ಸ

ಈ ಆರೋಹ ಅವರೋಹಗಳಿಂದ ರಾಗವನ್ನು ಕಂಡುಹಿಡಿಯಬಹುದು. ಅಲ್ಲದೆ—

"ಚತುರ್ವಿಧ ಸ್ವರಾವಾದೀ ಸಂವಾದೀ ಚವಿವಾದ್ಯಪೀ।
ಅನುವಾದೀತತೋತ್ಪತ್ತೀ ಪ್ರೋಕ್ತಾದೀ ಚ ಚತುರ್ವಿಧಂ॥"

ಅಂದರೆ ರಾಗದ ಸ್ವರೂಪವನ್ನು ತೋರಿಸಲು ಪ್ರತಿಯೊಂದು ರಾಗಕ್ಕೂ ವಾದಿ, ಸಂವಾದಿ, ಅನುವಾದಿ, ವಿವಾದಿ ಎಂಬ ನಾಲ್ಕು ಸ್ವರಗಳ ಪ್ರಾಮುಖ್ಯತೆ ಇದೆ. ರಾಗದ ಆಲಾಪನೆಯನ್ನು ಈ ವಾದಿ ಲಕ್ಷಣಗಳಿಗನುಗುಣವಾಗಿ ಮಾಡತಕ್ಕದಾಗಿದೆ.

ವಾದಿ:—ರಾಗ ಸ್ವರೂಪವನ್ನು ಸೂಚಿಸುವ, ರಾಗಾಲಾಪನೆಗೆ ಮುಖ್ಯ ಸ್ವರವೆನಿಸುವ, ಅರ್ಥಾತ್ ರಾಗದ ಜೀವಾಳವೆನಿಸುವ ಸ್ವರವು ವಾದಿ ಎಣಿಸುವುದು.

ಸಂವಾದಿ:—ರಾಗ ರಚನೆಗೆ ಅನುಕೂಲವಾಗಿ ಪದೇ ಪದೇ ವಾದಿಯ ಸಹಾಯಕವಾಗಿ ಬರುವ ಸ್ವರವು ಸಂವಾದಿ ಎನಿಸುವುದು.


ಅನುವಾದಿ:—ವಾದಿ ಸಂವಾದಿಗಳಿಗೆ ವ್ಯತಿರಿಕ್ತವಾಗದೆ ರಾಗ ಸ್ವರೂಪವನ್ನು ತೋರಿಸಲು ಸಹಕರಿಸುವ ಸ್ವರಗಳೆಲ್ಲವೂ ಅನುವಾದಿಗಳು.

ವಿವಾದಿ:—ಯಾವ ಸ್ವರವನ್ನು ರಾಗದ ಮಧ್ಯೆ ಪ್ರಯೋಗಿಸಿದರೆ ಆ ರಾಗದ ಸ್ವರೂಪವು ಕೆಡುವ ಸಂಭವವಿದೆಯೋ ಅದು ವಿವಾದಿ ಎಣಿಸುವುದು. ವಿವಾದಿಯನ್ನು ವರ್ಜ್ಯ ಸ್ವರವೆಂದೂ ಹೇಳುತ್ತಾರೆ.

ಈ ವಾದಿ, ಸಂವಾದಿ, ಅನುವಾದಿ, ವಿವಾದಿಗಳಿಗನುಕ್ರಮವಾಗಿ ರಾಜ, ಮಂತ್ರಿ, ಸೇವಕ, ವೈರಿ ಎಂಬ ಉಪಮೆಯನ್ನಿತ್ತರೆ ಅವುಗಳ ವಿಷಯದ ಜ್ಞಾನವು ಸುಲಭವಾಗಿ ಉಂಟಾಗುವುದು.

ರಾಗ ಭೇದಗಳು

ರಾಗಗಳಲ್ಲಿ ಸಂಪೂರ್ಣ, ಷಾಡವ, ಔಡವ ಹೀಗೆ ಮೂರು ಮುಖ್ಯ ವರ್ಗಗಳೂ ವಕ್ರಸಂಪೂರ್ಣ, ಸಂಕೀರ್ಣಗಳೆಂಬ ಎರಡು ಉಪವರ್ಗಗಳೂ ಇವೆ. ಉಪವರ್ಗದಲ್ಲಿ ಕೆಳಗೆ ಕೊಟ್ಟಂತೆ ಭೇದಗಳಿವೆ.



ಆರೋಹಾವರೋಹಗಳಲ್ಲಿ ಏಳು ಸ್ವರಗಳಿದ್ದರೆ ಅದು ಸಂಪೂರ್ಣ ವರ್ಗದ ರಾಗವೆನಿಸುವುದು.

ಉದಾ:— ಆರೋಹ— ಸ ರಿ ಗ ಮ ಪ ಧ ನಿ (ಸ)
ಅವರೋಹ—(ಸ) ನಿ ಧ ಪ ಮ ಗ ರಿ ಸ

ಆರೋಹಾವರೋಹಗಳಲ್ಲಿ ಆರು ಸ್ವರಗಳಿದ್ದರೆ ಅದು ಷಾಡವ ವರ್ಗದ್ದೆನಿಸುವುದು.

ಉದಾ:— ಆರೋಹ— ಸ ರಿ ಗ ಮ ಧ ನಿ (ಸ)
ಅವರೋಹ—(ಸ) ನಿ ಧ ಮ ಗ ರಿ ಸ

ಆರೋಹಾವರೋಹಗಳಲ್ಲಿ ಐದೇ ಸ್ವರಗಳಿದ್ದರೆ ಅದು ಔಡವ ವರ್ಗದ ರಾಗವಾಗುವುದು.

ಉದಾ:— ಆರೋಹ— ಸ ರಿ ಗ ಪ ಧ (ಸ)
ಅವರೋಹ—(ಸ) ಧ ಪ ಗ ರಿ ಸ

ಹೀಗೆಯೇ ಉಪವರ್ಗಗಳನ್ನು ಕಂಡು ಹಿಡಿಯುವುದು.

ಉದಾ:— ವಕ್ರಸಂಪೂರ್ಣ

೧. ಷಾಡವ-ಸಂಪೂರ್ಣ ಆರೋಹ— ಸ ರಿ ಗ ಮ ಪ ಧ (ಸ)
ಅವರೋಹ—(ಸ) ನಿ ಧ ಪ ಮ ಗ ರಿ ಸ

೨. ಔಡವ-ಸಂಪೂರ್ಣ ಆರೋಹ— ಸ ರಿ ಗ ಪ ಧ (ಸ)
ಅವರೋಹ—(ಸ) ನಿ ಧ ಪ ಮ ಗ ರಿ ಸ

೩. ಸಂಪೂರ್ಣ-ಷಾಡವ ಆರೋಹ— ಸ ರಿ ಗ ಮ ಪ ಧ ನಿ (ಸ)
ಅವರೋಹ—(ಸ) ನಿ ಧ ಪ ಗ ರಿ ಸ

೪. ಸಂಪೂರ್ಣ-ಔಡವ ಆರೋಹ— ಸ ರಿ ಗ ಮ ಪ ಧ ನಿ (ಸ)
ಅವರೋಹ—(ಸ) ಧ ಪ ಗ ರಿ ಸ

ಸಂಕೀರ್ಣ

*೧. ಷಾಡವ-ಷಾಡವ ಆರೋಹ— ಸ ರಿ ಗ ಮ ಪ ನಿ (ಸ)
ಅವರೋಹ—(ಸ) ಧ ಪ ಮ ಗ ರಿ ಸ

೨. ಷಾಡವ-ಔಡವ ಆರೋಹ— ಸ ಗ ಮ ಪ ಧ ನಿ (ಸ)
ಅವರೋಹ—(ಸ) ಧ ಪ ಗ ರಿ ಸ

*೩. ಔಡವ-ಔಡವ ಆರೋಹ— ಸ ರಿ ಗ ಪ ಧ (ಸ)
ಅವರೋಹ—(ಸ) ನಿ ಪ ಮ ರಿ ಸ

೪. ಔಡವ-ಷಾಡವ ಆರೋಹ—ಸ ರಿ ಗ ಪ ಧ (ಸ)
ಅವರೋಹ— (ಸ) ನಿ ಧ ಮ ಗ ರಿ ಸ

* ಷಾಡವ-ಷಾಡವ, ಔಡವ-ಔಡವ ಇವು ಮುಖ್ಯ ವರ್ಗದಂತೆ ಆರೋಹಾವರೋಹಗಳಲ್ಲಿ ಕ್ರಮವಾಗಿ ಆರು ಮತ್ತು ಐದು ಸ್ವರಗಳನ್ನೇ ಕೂಡಿದ್ದರೂ ಅವುಗಳ ಆರೋಹಿ ಸ್ವರಮಾಲೆಯೂ, ಅವರೋಹಿ ಸ್ವರಮಾಲೆಯೂ ಭಿನ್ನವಾಗಿರುವುದರಿಂದ ಸಂಕೀರ್ಣ ಜಾತಿಯೆಂದು ಪರಿಗಣಿಸಲ್ಪಟ್ಟವೆ.

ನೂತನ ಅಭ್ಯಾಸಿಗಳಿಗಾಗಿ ಸುಲಭ ರೀತಿಯಲ್ಲಿ, ಹಾರ್ಮೋನಿಯಂನಲ್ಲಿ ಸ್ವರಗಳನ್ನು ಕಂಡುಹಿಡಿಯಲು
ತೋರಿಸುವ ನಕಾಶೆ (ಚಿತ್ರ).

ಮಂದ್ರಸ್ಥಾಯಿ (ಸಪ್ತಕ)	ಮಧ್ಯಸ್ಥಾಯಿ (ಸಪ್ತಕ)	ತಾರಸ್ಥಾಯಿ (ಸಪ್ತಕ)
ರೆ ಗ ಮ ಧ ನಿ	ರೆ ಗ ಮ ಧ ನಿ	ರೆ ಗ ಮ ಧ ನಿ
ಸ ರೆ ಗ ಮ ಪ ಧ ನಿ	ಸ ರೆ ಗ ಮ ಪ ಧ ನಿ	ಸ ರೆ ಗ ಮ ಪ ಧ ನಿ ಸ

ಹಾರ್ಮೋನಿಯಂ

ಈ ವಾದ್ಯವು ಹೆಚ್ಚಾಗಿ ಮೂರು ಸಪ್ತಕ (ಸ್ಥಾಯಿ) ಗಳಿಂದ ಕೂಡಿದುದಾಗಿದೆ. ಯಾವುದೇ ಪಟ್ಟಿಯನ್ನು ಷಡ್ಜವನ್ನಾಗಿ ಕಲ್ಪಿಸಿದರೆ, ಅದರ ಮುಂದಿರುವ ಪಟ್ಟಿಯು ಬಿಳಿ ಅಥವಾ ಕರಿಯದೇ ಆಗಲಿ ಅದು ಕೋಮಲ ಋಷಭವೆಂದೂ, ಅದಕ್ಕೆ ತಾಗಿರುವ ಪಟ್ಟಿಯು ಶುದ್ಧ ಋಷಭವೆಂದೂ ತಿಳಿಯತಕ್ಕದ್ದು. ಹೀಗೆ ಅನುಕ್ರಮವಾಗಿ ಕೋಮಲ ಗಾಂಧಾರ, ಶುದ್ಧ ಗಾಂಧಾರ, ಶುದ್ಧ ಮಧ್ಯಮ, ತೀವ್ರ ಮಧ್ಯಮ, ಪಂಚಮ, ಕೋಮಲ ದೈವತ, ಶುದ್ಧ ದೈವತ, ಕೋಮಲ ನಿಷಾಧ, ಶುದ್ಧ ನಿಷಾಧವೂ ಇವೆ. ಇದರ ಎದುರುಗಡೆ ಕಾಣಿಸಿರುವ ರೀತಿಯಿಂದ ಅದನ್ನು ತಿಳಿಯುವರೆ ಮತ್ತಷ್ಟು ಸುಲಭವಾಗುವುದು.

ಬಾರಿಸುವ ಕ್ರಮ

ಹಾರ್ಮೋನಿಯಂ ಬಾರಿಸುವಾಗ್ಗೆ ಬೆರಳುಗಳ ಚಲನೆಯ ವಿಷಯವಾಗಿ ಬಹಳ ಜಾಗರೂಕತೆಯಿಂದಿರಬೇಕು. ಹಾಗಿದ್ದರೆ ಮಾತ್ರ ಮುಂದೆ ಎಷ್ಟು ತೀವ್ರವಾಗಿಯಾದರೂ, ಏನೊಂದೂ ಕಷ್ಟ ವಿಲ್ಲದೆ ಬೆರಳುಗಳನ್ನು ನಡೆಸಬಹುದು. ಯಾವ ಬಿಳಿಯ ಪಟ್ಟಿಯನ್ನು ಷಡ್ಜವನ್ನಾಗಿ ಕಲ್ಪಿಸಿ ಬಾರಿಸುವುದಾದರೂ ಕ್ರಮವಾಗಿ ಅಂಗುಷ್ಟ, ತರ್ಜನಿ, ಮಧ್ಯಮ, ಅನಾಮಿಕಾ ಹೀಗೆ ನಿಶ್ಚಿತ ರೀತಿಯಿಂದ ಬೆರಳುಗಳನ್ನಿಡತಕ್ಕದ್ದು. ಕಪ್ಪು ಪಟ್ಟಿಯಲ್ಲಾದರೆ ತರ್ಜನಿ ಯಾ ಮಧ್ಯಮ ಬೆರಳಿನಿಂದ ಪ್ರಾರಂಭಿಸಬೇಕು. ಬೆರಳುಗಳು ಒಂದಕ್ಕೊಂದು ಅಡ್ಡ ಹಾಯ್ದು ಅಥವಾ ಒಂದರ ಮೇಲಿನಿಂದ ಹೋಗಬಾರದು. ತೀವ್ರ ಚಲನೆಗೆ ಅದರಿಂದ ತೊಡಕುಂಟಾಗುವುದು. ಪ್ರಾರಂಭದಲ್ಲಿ ಅಂಗುಷ್ಟ ವನ್ನು ಕಪ್ಪು ಪಟ್ಟಿಯ ಮೇಲೊಯ್ಯಬಾರದು. ಪ್ರಸಂಗಾನುಸಾರ ಕಿರು ಬೆರಳನ್ನು ಉಪಯೋಗಿಸುವ ರೂಢಿಯನ್ನು ಮಾಡಿಕೊಂಡಿರ ಬೇಕು. ಹೀಗೆ ನಿಯಮದಿಂದ ಬಾರಿಸುತ್ತಿದ್ದರೆ ಅನುಕೂಲ ಪ್ರಸಂಗ ದಲ್ಲಿ ಅವುಗಳ ವ್ಯತ್ಯಾಸವನ್ನು ಮಾಡಬರುವುದಲ್ಲದೆ ಬಾರಿಸುವ

ಗತಿಯನ್ನು ಬೇಕಾದಷ್ಟು ತೀವ್ರವಾಗಿ ಮಾಡಬಹುದು. ಹಾರ್ಮೋನಿಯಂ ಬಾರಿಸುವಾಗ್ಗೆ ಅದನ್ನು ನೋಡುವ ಪರಿಪಾಠವನ್ನು ಕ್ರಮೇಣ ಬಿಡುತ್ತಾ ಬರಬೇಕು.

ಅಭ್ಯಾಸ ಕ್ರಮ

ಹಾರ್ಮೋನಿಯಂನೊಡನೆ ಹಾಡುವವರು ತಮ್ಮ ಕಂಠಾನು ಕೂಲವಾಗಿ ಯಾವುದಾದರೂ ಒಂದೇ ಪಟ್ಟೆಯನ್ನು ಷಡ್ಜವನ್ನಾಗಿ ಕಲ್ಪಿಸಿ ಯಾವಾಗಲೂ ಅದರಲ್ಲೇ ಹಾಡುವ ಅಭ್ಯಾಸ ಮಾಡುವುದು ಅವಶ್ಯಕವಾಗಿದೆ. ಯಾವ ಪಟ್ಟೆಯು ನಮ್ಮ ಶ್ರುತಿಯಾಗಿ ಮಾಡ ಲ್ಪಟ್ಟಿತೋ ಅದನ್ನು ಮಂದ್ರ ಸಪ್ತಕದಲ್ಲಿಟ್ಟು ಮಧ್ಯ ಸಪ್ತಕದ ಅದೇ ಪಟ್ಟೆಯಿಂದ, ಅರ್ಥಾತ್ ಶ್ರುತಿಯಿಟ್ಟ ಪಟ್ಟೆಯನ್ನು ಕೂಡಿ ಹದಿ ಮೂರನೇ ಪಟ್ಟೆಯ ವರೆಗೆ ಎಣಿಸಿ, ಆ ಹದಿಮೂರನೇ ಪಟ್ಟೆಯನ್ನು ಷಡ್ಜವನ್ನಾಗಿ ಕಲ್ಪಿಸಿ ಬಾರಿಸಲುಪಕ್ರಮಿಸಬೇಕು. ಅಲ್ಲದೆ ನಾವು ಆ ಶ್ರುತಿಯಿಂದ ಹಾಡುವಾಗ,

"ಪ಼ ಧ಼ ನಿ಼ ಸ ರಿ ಗ ಮ ಪ ದ ನಿ ಸ಼ ರಿ಼ ಗ಼ ಮ಼ ಪ಼"

ಹೀಗೆ ಮಂದ್ರ ಸಪ್ತಕದ ಪಂಚಮದಿಂದ ತಾರ ಸಪ್ತಕದ ಪಂಚಮದ ವರೆಗೆ ಸ್ವರವು ಅನಾಯಾಸವಾಗಿ ಹೋಗುವಂತಿರಬೇಕು. ಹಾಗಾದರೆ ಮಾತ್ರ ಆ ಶ್ರುತಿಯಿಂದ ಹಾಡಿದರೆ ಶ್ರೋತೃಗಣಕ್ಕೆ ಆನಂದವಾದೀತಲ್ಲದೆ ನಮಗೂ ಆಯಾಸವಿರದೆ ನಮ್ಮ ಸ್ವರವೂ ಅದರ ಸ್ವರವೂ ಒಂದೇ ರೀತಿ ಕೂಡುವುದು, ಹಾರ್ಮೋನಿಯಂ ಬಾರಿಸುವ ಜೊತೆಯಲ್ಲಿ ಹಾಡುವ ಅಭ್ಯಾಸವೂ ಇರಬೇಕು. ಹಾಡುವಾಗ ಅಪ ಸ್ವರ ಬಾರದಂತೆ ಬಹಳ ಜಾಗರೂಕತೆ ವಹಿಸಿಕೊಳ್ಳಬೇಕು. ಆರಂಭ ದಲ್ಲಿ ಬಹಳ ನಿಧಾನವಾಗಿ ಹಾಡಬೇಕು ಪ್ರಥಮದಿಂದಲೇ ತಾಳಲಯ ಗಳ ನಿರ್ಬಂಧದೊಡನೆ ಕಲಿಯಲಾರಂಭಿಸುವುದುತ್ತಮ. ಪದದ ಧಾಟಿಯು ತಿಳಿದು, ಅದನ್ನು ತಾಳಹಾಕಿ ಹೇಳಿ ಸರಿಯಾದ ನಂತರವೇ ಹಾರ್ಮೋನಿಯಂನಲ್ಲಿ ಬಾರಿಸುವುದು ಅತ್ಯಂತ ಉಪಯುಕ್ತ ವಿಷಯ

ವಾಗಿದೆ. ತಮಗೆ ಬರುವ ಪದಗಳನ್ನು ಪ್ರಯತ್ನಪೂರ್ವಕವಾಗಿ ಹಾರ್ಮೋನಿಯಂನಲ್ಲಿ ಬಾರಿಸಬೇಕು. ಹಾರ್ಮೋನಿಯಂ ಬಾರಿಸುವಾಗ ಅಥವಾ ಬಾಯಿಯಿಂದ ಹಾಡುವಾಗ ತಲೆ ಅಲುಗಾಡಿಸುವುದೇ ಮುಂತಾದ ಯಾವ ತರದ ಅಂಗವಿಕಾರಗಳೂ ಆಗದಂತೆ ಎಚ್ಚರದಿಂದಿರಬೇಕು. ಕಾಲಮಾನಕ್ಕೆ ಸರಿಯಾದ ರಾಗಗಳನ್ನು ಹಾಡುವುದೇ ಬಹಳ ಉತ್ತಮ.

ತಾಳ

ಸಂಗೀತ ಶಾಸ್ತ್ರಾನುಸಾರ ತಾಳ ರಚನೆಗೆ ಕಾಲಮಾನದ ಕ್ರಮವನ್ನು ಮಾಡಿದ್ದಾರೆ. ಈ ಕಾಲಗಣನೆಯು ಮಾತ್ರೆ, ಯಾ ಅಕ್ಷರದಿಂದುಂಟಾಗುತ್ತದೆ. ಅಕ್ಷರಕಾಲ ಅಥವಾ ಮಾತ್ರೆಯೆಂಬುದು ಒಂದು ಹ್ರಸ್ವ ಸ್ವರವನ್ನುಚ್ಚರಿಸಲು ಹಿಡಿಯುವಷ್ಟು ಕಾಲವು. ಈ ಮಾತ್ರೆ ಅಥವಾ ಅಕ್ಷರಗಳ ನಿಯಮಿತ ಪ್ರಮಾಣದಿಂದ ತಾಳಗಳುತ್ಪನ್ನವಾಗುತ್ತವೆ. ಪ್ರತಿಯೊಂದು ತಾಳವನ್ನೂ ಕೆಲವು ಭಾಗಗಳಾಗಿ ವಿಂಗಡಿಸಿ ಆ ಭಾಗದ ಪ್ರಥಮದಲ್ಲಿ ತಾಳ ಮತ್ತು ಹುಸಿ (ಕಾಲ)ಯ ನಿಯಮವನ್ನು ಮಾಡಿದ್ದಾರೆ.

ನಿಶ್ಚಿತ ಮಾತ್ರಾಂತರದಲ್ಲಿ ಎರಡೂ ಕೈಗಳ ಸಂಯೋಗದಿಂದ ನಿಯಮಿತ ಸ್ಥಳದಲ್ಲಿ ಯಾವ ಪೆಟ್ಟನ್ನು ಹಾಕಬೇಕೋ ಅದು ತಾಳವೆನಿಸುವುದು.

ನಿಯಮಿತ ಸ್ಥಳದಲ್ಲಿ ಪೆಟ್ಟು ಹಾಕಬೇಕಾಗಿದ್ದರೂ ಹಾಕದೆ ಸಂಜ್ಞೆಯನ್ನು ಮಾತ್ರ ತೋರಿಸುವುದು ಹುಸಿ ಅಥವಾ ಕಾಲವೆನಿಸುವುದು.

ಪ್ರತಿ ತಾಳದ ಮೊದಲನೇ ಭಾಗದ ಪ್ರಥಮ ಮಾತ್ರೆಯ ಅಕ್ಷರವು ಪ್ರಧಾನ ಪೆಟ್ಟಿನ ಕಡೆಯೆನಿಸುವುದರಿಂದ ಅದನ್ನು "ಸಮ ಅಥವಾ ತಾಳದ ಮುಖ"ವೆಂದು ಹೇಳುತ್ತಾರೆ.

ಈ ಸಮಪೆಟ್ಟಿನಿಂದಾರಂಭಿಸಿ ಎಲ್ಲೆಲ್ಲಿ ತಾಳ ಕಾಲಗಳನ್ನು ತೋರಿಸಬೇಕೋ ಅಲ್ಲಲ್ಲಿ ತೋರಿಸಿ ಉಳಿದ ಮಾತ್ರೆ ಅಥವಾ ಅಕ್ಷರಗಳನ್ನು ಬೆರಳುಗಳ ಮಡಚುವಿಕೆಯಿಂದ ಎಣಿಸಬೇಕು.

ವಿ·ಸೂ:—ತಾಳದ ವಿಶೇಷ ಮಾಹಿತಿಯನ್ನು ಸಮೀಪದಲ್ಲಿರುವ ತಜ್ಞರ ಮೂಲಕ ತಿಳಿಯುವುದುತ್ತಮ. ಎಷ್ಟು ವಿಸ್ತರಿಸಿ ಬರೆದರೂ ಅದು ಸ್ವತಹ ಹೇಳಿದಷ್ಟು ಉಪಯೋಗವಾಗುವುದಿಲ್ಲ.

ಈ ಪುಸ್ತಕದಲ್ಲಿ ಉಪಯೋಗವಾಗಿರುವ ತಾಳಗಳನ್ನೂ ಅವುಗಳ ಸಂಜ್ಞೆಯನ್ನೂ ಕೆಳಗೆ ಕೊಟ್ಟಿರುತ್ತದೆ.

೧. ತ್ರಿತಾಲ. ೧೬ ಮಾತ್ರೆ (ಅಕ್ಷರ) ನಾಲ್ಕು ಭಾಗಗಳು.

೧ ೨ ೩ ೪	೫ ೬ ೭ ೮	೯ ೧೦ ೧೧ ೧೨	೧೩ ೧೪ ೧೫ ೧೬
÷	—	○	—
ನಾ ಧಿನ್ ಧಿನ್ ನಾ	ನಾ ಧಿನ್ ಧಿನ್ ನಾ	ನಾ ತಿನ್ ತಿನ್ ನಾ	ನಾ ಧಿನ್ ಧಿನ್ ನಾ
ಸಮ	ಪೆಟ್ಟು	ಹುಸಿ	ಪೆಟ್ಟು

ವಿ. ಸೂ:—ತ್ರಿತಾಲದ ಪದಗಳು ಬಹುಳವಾಗಿ ಹುಸಿಯಿಂದ ಪ್ರಾರಂಭಿಸಲ್ಪಡುತ್ತವೆ.

೨. ಯಕ್ತಾ. ೧೨ ಮಾತ್ರೆ. ಆರು ಭಾಗಗಳು

೧ ೨	೩ ೪	೫ ೬	೭ ೮	೯ ೧೦	೧೧ ೧೨
÷	○	—	○	—	—
ಧಿನ್ ಧಿನ್	ನ್ನಾ ತ್ರಕ	ತೋ ನ್ನಾ	ಕ ತ್ತಿ	ನ್ನಾ ತ್ರಕ	ಧಿನ್ ನ್ನಾ
ಸಮ	ಹುಸಿ	ಪೆಟ್ಟು	ಹುಸಿ	ಪೆಟ್ಟು	ಪೆಟ್ಟು

೩. ಚೌತಾಲ. ೧೨ ಮಾತ್ರೆ. ಆರು ಭಾಗಗಳು.

೧ ೨	೩ ೪	೫ ೬	೭ ೮	೯ ೧೦	೧೧ ೧೨
÷	○	—	○	—	—
ಧಾ ಧಾ	ಧಿನ್ ತಾ	ತಿಟ ಧಾ	ಧಿನ್ ತಾ	ತಿಟ ಕತ	ಗದಿ ಗನ
ಸಮ	ಹುಸಿ	ಪೆಟ್ಟು	ಹುಸಿ	ಪೆಟ್ಟು	ಪೆಟ್ಟು

೪. ಝುಪತಾಲ (ಝುಂಪೆ). ೧೦ ಮಾತ್ರೆ, ನಾಲ್ಕು ಭಾಗಗಳು.

೧	೨	೩	೪	೫	೬	೭	೮	೯	೧೦
÷		—			೨		—		
ಧೀ	ನ್ನಾ	ಧಿನ್	ಧಿನ್	ನಾ	ತೀ	ನ್ನಾ	ಧಿನ್	ಧಿನ್	ನಾ
ಸಮ		ಪೆಟ್ಟು			ಹುಸಿ		ಪೆಟ್ಟು		

೫. ದಾದರಾ. ೬ ಮಾತ್ರೆ. ಮೂರು ಭಾಗಗಳು.

೧	೨	೩	೪	೫	೬
÷		—		೦	
ಧಾ	ಧಿನ್	ನ್ನಾ	ಧಾ	ತೀ	ನ್ನಾ
ಹುಸಿ		ಪೆಟ್ಟು		ಹುಸಿ	

೬. ಕೇರವಾ. ೪ ಮಾತ್ರೆ. ಎರಡು ಭಾಗಗಳು.

೧	೨	೩	೪
÷		೦	
ಧಾಗೆ	ನತಿ	ನ್ನಕ	ಧಿನ್
ಸಮ		ಹುಸಿ	

ಚಿಹ್ನಾ ಪರಿಚಯ

ಕೆಳಗೆ ಕೊಟ್ಟಿರುವ ಚಿಹ್ನಾ ಪರಿಚಯವು ಈ ಪುಸ್ತಕಕ್ಕೆ ಸಂಬಂಧಿಸಿದುದಾಗಿದೆ.

ಮಂದ್ರ ಸಪ್ತಕ:— ಇದನ್ನು ತಿಳಿಯಲು ಸ್ವರಗಳ ಕೆಳಗೆ . . . . ಈ ಗುರುತು ಹಾಕಲ್ಪಟ್ಟಿದೆ.

ಉದಾ:— ಸ ನಿ̣ ಧ̣ ಪ̣ ಧ̣ ನಿ̣ ಸಾ

ತಾರ ಸಪ್ತಕ:— ಇದು ಸ್ವರಗಳ ಮೇಲೆ . . . . ಈ ರೀತಿ ಯಾಗಿ ಗುರುತಿಸಲ್ಪಟ್ಟಿದೆ.

ಉದಾ:— ನಿ ಸ̇ ರೆ̇ ಗ̇ ಮ̇ ಗ̇ ರೆ̇ ಸಾ̇ ನಿ ಧ ಪ

ಯಾವ ಚಿಹ್ನೆಯೂ ಇರದ ಸ್ವರಗಳನ್ನು ಮಧ್ಯ ಸಪ್ತಕದ ಶುದ್ಧ ಸ್ವರಗಳೆಂದು ತಿಳಿಯತಕ್ಕದ್ದು. ಉದಾ:—

ಧ ನಿ ಸ ರಿ ಗ ಪ ಧ ಸಿ ಸ ರಿ

ಕೋಮಲ:—ಇದನ್ನು ತಿಳಿಯಲು ಸ್ವರಗಳ ಮೇಲೆ ⌣ ಈ ಗುರುತನ್ನು ಕೊಟ್ಟಿದೆ. ಉದಾ:—

ಸ ಗ ಮ ಪ ಸಿ ಸ

ತೀವ್ರ:— ಈ ಸ್ವರದ ಮೇಲೆ ∧ ಹೀಗೆ ಗುರುತು ಇದೆ. ಉದಾ:—

ನಿ ರಿ ಗ ಮ ಗ ರಿ.

ಸಮ:—ತಾಳದ ಪ್ರಥಮಾಕ್ಷರ (ಮಾತ್ರೆ)ವು ಅಂದರೆ ಮುಖವು ÷ ಹೀಗೆ ಗುರುತಿಸಿದೆ.

ತಾಲ:—ಪೆಟ್ಟು ಬೀಳಬೇಕಾದ ಕಡೆ — ಈ ಗುರುತು ಇದೆ.

ಹುಸಿ:—ಸಂಗೀತ ಶಾಸ್ತ್ರಾನುಸಾರವಾಗಿ, ಪೆಟ್ಟು ಬೀಳಬೇಕಾದ ಕಡೆಯಾದರೂ ಅದನ್ನು ಸಂಜ್ಞಾ ಮಾತ್ರದಿಂದ ತೋರಿಸಬೇಕಾದ ಕಡೆಯು ೦ ಹೀಗೆ ಗುರುತಿಸಲ್ಪಟ್ಟಿದೆ.

ಸ್ವರಗಳ ಮೇಲೆ ⌢ ಹೀಗೆ ಗುರುತುಗಳಿದ್ದರೆ ಅವುಗಳನ್ನು ಒಂದೇ ಮಾತ್ರೆಯ ಕಾಲದಲ್ಲಿ ಉಚ್ಚರಿಸಬೇಕು.

ಒಂದು ಅಕ್ಷರ ಅಥವಾ ಸ್ವರವನ್ನು ಒಂದಕ್ಕಿಂತ ಅಧಿಕ ಮಾತ್ರೆಯ ವರೆಗೆ ಎಳೆಯಬೇಕಾದ ಕಡೆಯಲ್ಲಿ — ಹೀಗೆ ಗುರುತು ಹಾಕಲ್ಪಟ್ಟಿದೆ.

ಈ ಪುಸ್ತಕದಲ್ಲಿರುವ ರಾಗಗಳನ್ನೂ ಅವುಗಳ ಆರೋಹ, ಅವರೋಹ, ವಾದಿ, ಸಂವಾದಿ, ವರ್ಜ್ಯ ಹಾಗೂ ವರ್ಗವನ್ನು ತೋರಿಸುವ ತಖ್ತೆ

ಕ್ರಮ ಸಂಖ್ಯೆ	ರಾಗದ ಹೆಸರು	ವರ್ಗ	ವಾದಿ	ಸಂವಾದಿ	ವರ್ಜ್ಯ (ವಿವಾದಿ)	ಆರೋಹ—ಅವರೋಹ
೧	ಭೂಪ	ಔಡವ	ಗ	ಧ	ಮ, ನಿ	ಸರಿಗಪಧಸ–ಸಧಪಗರಿಸ
೨	ಭೀಂಪಲಾಸ	ಔಡವ-ಸಂಪೂರ್ಣ	ಮ	ಸ	ರಿ, ಧ	ಸಗಮಪನಿಸ–ಸನಿಧಪಮಗರಿಸ
೩	ಯಮನ	ಸಂಪೂರ್ಣ	ಗ	ನಿ	—	ಸರಿಗಮಪಧನಿಸ-ಸನಿಧಪಮಗರಿಸ
೪	ಭೈರವಿ	ಸಂಪೂರ್ಣ	ಧ	ಗ	—	ಸರಿಗಮಪಧನಿಸ-ಸನಿಧಪಮಗರಿಸ
೫	ಜೀವನಪುರಿ	ಷಾಡವ-ಸಂಪೂರ್ಣ	ಪ	ಸ	ಗ	ಸರಿಮಪಧನಿಸ-ಸನಿಧಪಮಗರಿಸ
೬	ತಿಲಂಗ	ಔಡವ	ಗ	ನಿ	ರಿ, ಧ	ಸಗಮಪನಿಸ–ಸನಿಪಮಗಸ
೭	ಸೋಹನಿ	ಷಾಡವ	ಗ	ಧ	ಪ	ಸರಿಗಮಧನಿಸ–ಸನಿಧಮಗರಿಸ
೮	ಸಾರಂಗ	ಔಡವ	ಪ	ರಿ	ಗ, ಧ	ಸರಿಮಪನಿಸ–ಸನಿಪಮರಿಸ
೯	ಕಾಫಿ	ಸಂಪೂರ್ಣ	ಪ	ರಿ	—	ಸರಿಗಮಪಧನಿಸ-ಸನಿಧಪಮಗರಿಸ

೧೦	ಬಾಗೇಸರೀ	ಔಡವ-ಸಂಪೂರ್ಣ	ನಿ	ಗ	ರಿ, ಪ	ಸಗಮಧಾನಿಸಾ-ಸನಿಧಪಮಗರಿಸ
೧೧	ಬಿಹಾಗ	ಔಡವ-ಸಂಪೂರ್ಣ	ಗ	ನಿ	ರಿ, ಧ	ಸಗಮಪನಿಸ-ಸನಿಧಪಮಗರಿಸ
೧೨	ಮಾಲಕಂಸ	ಔಡವ	ಮ	ನಿ	ರಿ, ಪ	ಸಗಮಧನಿಸ-ಸನಿಧಮಗಸ
೧೩	ದುರ್ಗಾ	ಔಡವ	ಮ	ಸ	ಗ, ನಿ	ಸರಿಮಪಧಸ-ಸಧಪಮರಿಸ
೧೪	ಹಮೀರ .	ಷಾಡವ–ಷಾಡವ	ಧ	ರಿ	ಪ, ಗ	ಸರಿಗಮಧನಿಸ-ಸನಿಧಪಮರಿಸ
೧೫	ದೇಸ	ಔಡವ-ಸಂಪೂರ್ಣ	ರಿ	ಪ	ಗ, ಧ	ಸರಿಮಪನಿಸ-ಸನಿಧಪಮಗರಿಸ
೧೬	ಮಾಂಡ	ಸಂಪೂರ್ಣ-ಷಾಡವ	ಸ	ಮಾ	ರಿ	ಸರಿಗಮಪಧನಿಸ-ಸನಿಧಪಮಗಸ
೧೭	ತಿಲಕ ಕಾಮೋದ	ಔಡವ–ಷಾಡವ	ಸ	ಪ	ಗಧ,ರಿ	ಸರಿಮಪನಿಸ-ಸನಿಧಪಮಗಸ
೧೮	ಶಂಕರಾ	ಷಾಡವ	ಗ	ನಿ	ಮ	ಸರಿಗಪಧನಿಸ-ಸನಿಧಪಗರಿಸ
೧೯	ಖಮಾಜ	ಷಾಡವ-ಸಂಪೂರ್ಣ	ಗ	ಧ	ಪ	ಸಗಮಧನಿಸ-ಸನಿಧಪಮಗರಿಸ
೨೦	ಆನಂದ ಭೈರವಿ	ಸಂಪೂರ್ಣ	ಧ	ಸ	—	ಸರಿಗಮಪಧನಿಸ-ಸನಿಧಪಮಗರಿಸ

ಅಭ್ಯಾಸಕ್ಕಾಗಿ ಕೆಲವು ಅಲಂಕಾರಗಳು

೧. **ಆರೋಹ:** ಸರಿಗಮಪದನಿಸ ।

ಅವರೋಹ: ಸನಿಧಪಮಗರಿಸ ॥

೨. **ಆರೋಹ:** ಸರಿಗಮ, ಸರಿಗಮ, ಸರಿಗಮ, ಪದನಿಸ ।

ಅವರೋಹ: ಸನಿಧಪ, ಸನಿಧಪ, ಸನಿಧಪ, ಮಗರಿಸ ॥

೩. **ಆರೋಹ:** ಸರಿಗ, ಸರಿಗ, ಸರಿ, ಸರಿಗಮ, ಪಧನಿಸ

ಅವರೋಹ: ಸನಿಧ, ಸನಿಧ, ಸನಿ, ಸನಿಧಪಮಗರಿಸ ॥

೪. **ಆರೋಹ:** ಸರಿಗಮ, ಪಮಗರಿ, ಸರಿಗಮಪಧನಿಸ ।

ಅವರೋಹ: ಸನಿಧಪ, ಮಪಧನಿ, ಸನಿಧಪ, ಮಗರಿಸ ॥

೫. **ಆರೋಹ:** ಸರಿಗ, ರಿಗಮ, ಗಮಪ, ಮಪಧ, ಪಧನಿ, ಧನಿಸ ।

ಅವರೋಹ: ಸನಿಧ, ನಿಧಪ, ಧಪಮ, ಪಮಗ, ಮಗರಿ, ಗರಿಸ ॥

೬. **ಆರೋಹ:** ಸರಿಗಮ, ರಿಗಮಪ, ಗಮಪಧ, ಮಪಧನಿ, ಪಧನಿಸ ।

ಅವರೋಹ: ಸನಿಧಪ, ನಿಧಪಮ, ಧಪಮಗ, ಪಮಗರಿ, ಮಗರಿಸ ॥

೭. **ಆರೋಹ:** ಸರಿ, ಸರಿಗಮ, ರಿಗ, ರಿಗಮಪ, ಗಮ, ಗಮಪಧ, ಮಪ, ಮಪಧನಿ, ಪಧ, ಪಧನಿಸ ।

ಅವರೋಹ: ಸನಿ, ಸನಿಧಪ, ನಿಧ, ನಿಧಪಮ, ಧಪ, ಧಪಮಗ, ಪಮ, ಪಮಗರಿ, ಮಗ, ಮಗರಿಸ ॥

೮. **ಆರೋಹ:** ಸರಿ, ರಿಗ, ಗಮ, ಮಪ, ಪಧ, ಧನಿ, ನಿಸ ।

ಅವರೋಹ: ಸನಿ, ನಿಧ, ಧಪ, ಪಮ, ಮಗ, ಗರಿ, ರಿಸ ॥

೯ ಆರೋಹ: ಸರಿಸ,ರಿಗರಿ,ಗಮಗ,ಮಪಮ,ಪದಪ,
ಧನಿಧ,ನಿಸನಿ ।

ಅವರೋಹ: ಸನಿಸ,ನಿಧನಿ,ಧಪದ,ಪಮಪ,ಮಪಮ,ಗಮಗ,
ರಿಗರಿ,ಗರಿಸ ॥

೧೦. ಆರೋಹ: ಸಾರಿಸಾ,ಗರಿಸಾ,ಮಗರಿಸ,ಪಮಗರಿಸಾ,
ಧಪಮಗರಿಸ,ನಿಧಪಮಗರಿಸಾ,
ಸನಿಧಪಮಗರಿಸಾ,ಸರಿಗಮಪಧನಿಸಾ ।

ಅವರೋಹ: ಸ,ನಿಸಾ,ಧನಿಸಾ,ಪಧನಿಸಾ,ಮಪಧನಿಸಾ,
ಗಮಪಧನಿಸಾ,ರಿಗಮಪಧನಿಸಾ,
ಸರಿಗಮಪಧನಿಸಾ,ಸನಿಧಪಮಗರಿಸಾ ॥

೧೧. ಆರೋಹ: ಸರಿಸ ರೀ-ರಿ,ರಿಗರಿ ಗಾ-ಗ,ಗಮಗ ಮಾ-ಮ,
ಮಪಮ ಪಾ-ಪ,ಪಧಪ ಧಾ-ದ,ಧನಿಧ ನೀ-ನಿ,
ನಿಧನಿ ಸಾ-ಸ ।

ಅವರೋಹ: ಸಾ-ಸ ನಿಧನಿ,ನೀ-ನಿ ಧನಿಧ,ಧಾ-ಧ ಪಧಪ,
ಪಾ-ಪ ಮಪಮ,ಮಾ-ಮ ಗಮಗ,
ಗಾ-ಗ ರಿಗರಿ,ರೀ—ರಿ ಸರಿಸ ॥

೧೨ ಆರೋಹ: ಸರಿ,ಸರಿಗಾ,ರಿಗ,ರಿಗಮಾ,ಗಮ,ಗಮಪಾ,ಮಪ,
ಮಪಧಾ,ಪಧ,ಪಧನೀ.ಧನಿ,ಧನಿಸಾ ।

ಅವರೋಹ: ಸನಿ—ಸನಿಧಾ,ನಿಧ,ನಿಧಪಾ,ಧಪ.ಧಪಮಾ,ಪಮ,
ಪಮಗಾ,ಮಗ,ಮಗರೀ,ಗರಿ,ಗರಿಸಾ ॥

೧೩. ಆರೋಹ: ಸರಿಸಾ,ಸರಿಗರಿಸಾ,ಸರಿಗಮಗರಿಸಾ,
ಸರಿಗಮಪಮಗರಿಸಾ,ಸರಿಗಮಪಧಪಮಗರಿಸಾ,
ಸರಿಗಮಪಧನಿಧಪಮಗರಿಸಾ,ಸರಿಗಮಪಧನಿಸ-
ನಿಧಪಮಗರಿಸ,ಸರಿಗಮಪಧನಿಸಾ ।

ಅವರೋಹ: ಸನಿಸಾ, ಸನಿಧನಿಸಾ, ಸನಿಧಪ ಪಧನಿಸಾ,
ಸನಿಧಪಮ ಪಧನಿಸಾ, ಸನಿಧಪಮಗಮ ಪಧನಿಸಾ,
ಸನಿಧಪಮಗರಿಗಮ ಪಧನಿಸಾ, ಸನಿಧಪಮಗರಿ-
ಸರಿಗಮಪಧನಿಸಾ, ಸಾನಿಧಪಮಗರಿಸಾ ॥

೧೪ **ಆರೋಹ:** ಸರಿ, ಸರಿಗರಿ, ಸರಿಗಮಗರಿ, ಸರಿಗಮಪಮಗರಿ,
ಸರಿಗಮಪಧಪಮಗರಿ, ಸರಿಗಮಪಧನಿಧಪ-
ಮಗರಿ, ಸರಿಗಮ-ಪಧನಿಸನಿಧಪಮಗರಿ,
ಸರಿಗಮಪಧನಿಸಾ ।

ಅವರೋಹ: ಸನಿ, ಸನಿಧನಿ, ಸನಿಧಪಧನಿ, ಸನಿಧಪಮಪಧನಿ,
ಸನಿಧಪಮಗಮಪಧನಿ, ಸನಿಧಪಮಗರಿಸರಿಗಮ-
ಪಧನಿ, ಸನಿಧಪಮಗರಿಸರಿಗಮಪಧನಿಸ,
ಸನಿಧಪಮಗರಿಸಾ ॥

೧೫. **ಆರೋಹ:** ಸರಿಗ, ಸರಿಗಮ, ರಿಗಮ, ರಿಗಮಪ, ಗಮಪ,
ಗಮಪಧ, ಮಪಧ, ಮಪಧನಿ, ಪಧನಿ, ಪಧನಿಸ ।

ಅವರೋಹ: ಸನಿಧ, ಸನಿಧಪ, ನಿಧಪ, ನಿಧಪಮ, ಧಪಮ,
ಧಪಮಗ, ಪಮಗ, ಪಮಗರಿ, ಮಗರಿ, ಮಗರಿಸ ॥

೧೬. **ಆರೋಹ:** ಸಗರಿಸ—ಮಗರಿಸ, ರಿಮಗರಿ—ಪಮಗರಿ,
ಗಪಮಪ—ಧಪಮಗ, ಮಧಪಮ-ನಿಧಪಮ,
ಪಸನಿಧ—ಸನಿಧಪ ।

ಅವರೋಹ: ಪಧನಿಸ-ಧಪನಿಪ, ಮಪಧನಿ-ಪಮಧಪ,
ಗಮಪಧ ಪಮಗಪ, ರಿಗಮಪ-ಮಗಮರಿ,
ಸರಿಗಮ-ಸರಿಗಸಾ ॥

೧೭. **ಆರೋಹ:** ಸಸ, ರಿರಿ, ಗಗ, ಮಮ, ಪಪ, ಧಧ, ನಿನಿ, ಸಸ ।
ಅವರೋಹ: ಸಸ, ನಿನಿ, ಧಧ, ಪಪ, ಮಮ, ಗಗ, ರಿರಿ, ಸಸ ॥

೧೮. ಆರೋಹ: ಸರಿಸ ಗಾ-ಗ,ರಿಗರಿ ಮಾ-ಮ,ಗಮಗ ಪಾ-ಪ,
ಮಪಮ ಧಾ-ಧ,ಪಧಪ ನೀ-ನಿ,ಧನಿಧ ಸಾ-ಸ ।

ಅವರೋಹ: ಸಾ-ಸ ಧನಿಧ,ನೀ-ನಿ ಪಧಪ,ದಾ-ಧ ಮಪಮ,
ಪಾ-ಪ ಗಮಗ,ಮಾ-ಮ ರಿಗರಿ,ಗಾ-ಗ ಸರಿಸ ॥

೧೯. ಆರೋಹ: ಗರಿಸರಿ ಗಾ-ಗಾ ಮಗರಿಗ ಮಾ-ಮಾ,ಪಮಗಮ
ಪಾ-ಪಾ ಧಪಮಪ ಧಾ-ಧಾ,ನಿಧಪಧ ನೀ-ನೀ,
ಸನಿಧನಿ ಸಾ-ಸಾ ।

ಅವರೋಹ: ಸಾ-ಸ ನಿಧನಿಸಾ,ನೀ-ನಿ ಧಪಧನೀ,ಧಾ-ಧಪ
ಮಪಧಾ,ಪಾ-ಪಮ ಗಮಪಾ,ಮಾ-ಮ ಗರಿ
ಗಮಾ.ಗಾ-ಗ ರಿಸರಿಗಾ,ರೀ-ರಿ ಗಸರಿಸಾ ॥

೨೦. ಆರೋಹ: ಗರಿಸ-ಗರಿಸ-ಗರಿ,ಗರಿಸರಿ-ಗರಿಸರಿ,ಮಗರಿ-
ಮಗರಿ-ಮಗ,ಮಗರಿಗ-ಮಗರಿಗ,ಪಮಗ-
ಪಮಗ-ಪಮ, ಪಮಗಮ-ಪಮಗಮ
ಧಪಮ-ಧಪಮ-ಧಪ,ಧಪಮಪ-ಧಪಮಪ.
ನಿಧಪ-ನಿಧಪ ನಿಧ ನಿಧಪಧ-ನಿಧಪದ,ಸನಿಧ-
ಸನಿಧ-ಸನಿ,ಸನಿಧನಿ,-ಸನಿಧನಿ ॥

ಅವರೋಹ: ನಿಧನಿಸ-ನಿಧನಿಸ-ನಿಸ-ಧನಿಸ-ಧನಿಸ, ಧಪ
ಧನಿ-ಧಪಧನಿ,ಧನಿ-ಪಧನಿ ಪಧನಿ.ಪಮಪಧ-
ಪಮಪಧ,ಪಧ-ಮಪಧ,ಮಗಮಪ.ಮಗಮಪ,
ಮಪ-ಗಮಪ-ಗಮಪ,ಗರಿಗಮ-ಗರಿಗಮ,
ಗಮ-ರಿಗಮ,-ರಿಗಮ, ರಿಸರಿಗ-ರಿಸರಿಗ,ರಿಗ-
ಸರಿಗ-ಸರಿಸಾ ॥

೨೧. ಆರೋಹ: ಸರಿಗ-ಸರಿಸ,ರಿಗಮ-ರಿಗರಿ,ಗಮಪ,ಗಮಗ,
ಮಪಧ,ಮಪಮ,ಪಧನಿ-ಪಧಪ ಧನಿಸ-ಧನಿಧ ।

ಅವರೋಹ: ಧನಿಧ–ಸನಿಧ, ಪಧಪ–ನಿಧನಿ, ಮಪಮ–
ಧಪಮ, ಗಮಗ ಪಮಗ, ರಿಗರಿ–ಮಗರಿ, ಸರಿಸ–
ಗರಿಸ ॥

೨೨. ಆರೋಹ: ಸ–ಗಾ, ರಿ–ಮಾ ಗ–ಪಾ, ಮ–ಧಾ, ಪ–ನೀ,
ಧ-ಸಾ ।

ಅವರೋಹ: ಸ-ಧಾ, ನಿ-ಪಾ, ಧ-ಮಾ, ಪ-ಗಾ, ಮ-ರೀ,
ಗ-ಸಾ ॥

೨೩. ಆರೋಹ. ಸಾಸ–ಗಗಗ, ರೀರಿ–ಮಮಮ, ಗಾಗ–ಪಪಪ,
ಮಾಮ–ಧಧಧ, ಪಾಪ–ನಿನಿನಿ, ಧಾಧ–ಸಸಸ ।

ಅವರೋಹ: ಸಸಸ–ಧಾಧ, ನಿನಿನಿ–ಪಾಪ, ಧಧಧ–ಮಾಮ,
ಪಪಪ–ಗಾಗ, ಮಮಮ–ರೀರಿ, ಗಗಗ–ಸಾಸ ॥

೨೪. ಆರೋಹ: ಸಸಾ-ಮಮಾ, ರಿರೀ-ಪಪಾ, ಗಗಾ, ಧಧಾ,
ಮಮಾ, ನಿನೀ, ಪಪಾ, ಸಸಾ ।

ಅವರೋಹ: ಸಸಾ, ಪಪಾ, ನಿನೀ-ಮಮಾ, ಧಧಾ-ಗಗಾ,
ಪಪಾ-ರಿರೀ, ಮಮಾ-ಸಸಾ ॥

ಸ್ವರಪರ್ವತ

ಆರೋಹೀ

ಸ ರಿ ಗ ಮ ಪ ಧ ನಿ ಸಾ

ಸ ರಿ ಗ ಮ ಪ ಧ ನಿ ಸ ರಿ ಗ ಮ ಪ ಮ ಗ ರಿ ಸ ನಿ ಧ ಪ ಮ ಗ ರಿ ಸಾ

ಸ ರಿ ಗ ಮ ಪ ಧ ನಿ ಸ ರಿ ಗ ಮ ಗ ರಿ ಸ ನಿ ಧ ಪ ಮ ಗ ರಿ ಸಾ

ಸ ರಿ ಗ ಮ ಪ ಧ ನಿ ಸ ರಿ ಗ ರಿ ಸ ನಿ ಧ ಪ ಮ ಗ ರಿ ಸಾ

ಸ ರಿ ಗ ಮ ಪ ಧ ನಿ ಸ ರಿ ಸ ನಿ ಧ ಪ ಮ ಗ ರಿ ಸಾ

ಸ ರಿ ಗ ಮ ಪ ಧ ನಿ ಸ ನಿ ಧ ಪ ಮ ಗ ರಿ ಸಾ

ಸ ರಿ ಗ ಮ ಪ ಧ ನಿ ಧ ಪ ಮ ಗ ರಿ ಸಾ

ಸ ರಿ ಗ ಮ ಪ ಧ ಪ ಮ ಗ ರಿ ಸಾ

ಸ ರಿ ಗ ಮ ಪ ಮ ಗ ರಿ ಸಾ

ಸ ರಿ ಗ ಮ ಗ ರಿ ಸಾ

ಸ ರಿ ಗ ರಿ ಸಾ

ಸಾ ರಿ ಸಾ

ಸಾ

ಅವರೋಹೀ

ಸಾ

ಸ ನಿ ಸಾ

ಸ ನಿ ಧ ನಿ ಸಾ

ಸ ನಿ ಧ ಪ ಧ ನಿ ಸಾ

ಸ ನಿ ಧ ಪ ಮ ಪ ಧ ನಿ ಸಾ

ಸ ನಿ ಧ ಪ ಮ ಗ ಮ ಪ ಧ ನಿ ಸಾ

ಸ ನಿ ಧ ಪ ಮ ಗ ರಿ ಗ ಮ ಪ ಧ ನಿ ಸಾ

ಸ ನಿ ಧ ಪ ಮ ಗ ರಿ ಸ ರಿ ಗ ಮ ಪ ಧ ನಿ ಸಾ

ಸ ನಿ ಧ ಪ ಮ ಗ ರಿ ಸ ನಿ ಸ ರಿ ಗ ಮ ಪ ಧ ನಿ ಸಾ

ಸ ನಿ ಧ ಪ ಮ ಗ ರಿ ಸ ನಿ ಧ ನಿ ಸ ರಿ ಗ ಮ ಪ ಧ ನಿ ಸಾ

ಸ ನಿ ಧ ಪ ಮ ಗ ರಿ ಸ ನಿ ಧ ಪ ಧ ನಿ ಸ ರಿ ಗ ಮ ಪ ಧ ನಿ ಸಾ

ಸ ನಿ ಧ ಪ ಮ ಗ ರಿ ಸ ನಿ ಧ ಪ ಮ ಪ ಧ ನಿ ಸ ರಿ ಗ ಮ ಪ ಧ ನಿ ಸಾ

ಸ ನಿ ಧ ಪ ಮ ಗ ರಿ ಸಾ

ಪದ್ಯಸಂಗ್ರಹ

೧. ರಾಗ—ಭೂಪ. ತ್ರಿತಾಳ.

ಇದು ಔಡವ ವರ್ಗಕ್ಕೆ ಸೇರಿದ ರಾಗವಾಗಿರುತ್ತದೆ. ಇದರಲ್ಲಿ ಮ ಮತ್ತು ನಿ ವರ್ಜ್ಯ ಸ್ವರಗಳು. ಎಲ್ಲ ಶುದ್ಧ ಸ್ವರಗಳೇ. ಸ ವಾದಿ ಮತ್ತು ಧ ಸಂವಾದಿಯಾಗಿರುತ್ತವೆ. ಕೆಲವರು ಪ ವಾದಿ ಸ ಸಂವಾದಿ ಎಂದೂ ಹೇಳುತ್ತಾರೆ. ಪೂರ್ವ ರಾತ್ರಿಯ ಒಂಭತ್ತು ಘಂಟೆಯ ವರೆಗೆ ಈ ರಾಗವು ಹಾಡಲ್ಪಡುತ್ತದೆ.

ಆರೋಹ: ಸ ರಿ ಗ ಪ ಧ ಸಾ ।

ಅವರೋಹ: ಸಾ ಧ ಪ ಗ ರಿ ಸಾ ॥

ಸುಖಕರವೆನಿಸಲಿ ದೇವಾ । ನಿಖಿಲ ಬುಧಾವಳಿ ನುತ ಸುಮನವೆಮಗೆ ॥ ಮುನ್ನ ಕಾಣೆವಾಧಾರವನು ಪ್ರಭೋ । ಸನ್ನುತ ಚರಿತನೆ ಕಾವುದೋ ॥ ಮುನ್ನುಡಿ ನೆನೆಯುವ ಖಲವಿಭಂಜನಾ ॥ ೧ ॥

○	—	÷	—
ಸ ಸ ರಿ ಧ಼	ಸ ಸ ಗ ರಿ	ಗಾ – – ಪ	ರೇ – ಸಾ –
ಸು ಖ ಕ ರ	ವೆ ನಿ ಸ ಲಿ	ದೇ – – ಎ	ವಾ – ಆ –
ಸ ರಿ ಗ ರಿ	ಸ ಧ಼ ಪ಼ ಪ಼	ಧ಼ ಧ಼ ಸ ಸ	ಸ ರಿ ಧ಼ ಸ
ನಿ ಖಿ ಲ ಬು	ಧ ಆ ವ ಳಿ	ನು ತ ಸು ಮ	ನ ವೆ ಮ ಗೆ

ಗ ರಿ ಸ ರಿ	ಸ ಧ ಸ ರಿ	ಸಾ – ಧ ಪ	ಗಪ ಧಪ ಗರಿ ಸರಿ
ಸು ಖ ಕ ರ	ವೆ ನಿ ಸ ಲಿ	ದೇ – ಎ ಎ	ವಅ ಅಅ ಅಅ ಅಅ
ಗ ರಿ ಸ ರಿ	ಸ ಧ ಸ ರಿ	ಗಾ – – ಪ	ರೀ – ಸಾ – ‖
ಸು ಖ ಕ ರ	ವೆ ನಿ ಸ ಲಿ	ದೇ – – ಎ	ವಾ – ಅ – ‖
ಧ ಸ ಧ ಪ	ಗ ರಿ ಸ ರಿ	ಗ ಪ ಧ ಸ	ಸ ರಿ ಧ ಸ
ಮು ಉ ನ್ನ ಕ	ಅ ಣೆ ವ ಅ	ಧ ಅ ರ ವ	ನು ಪ್ರ ಭೊ ಒ
ಧಾ – ಧ ಧ	ಸ ಸ ರಿ ರೀ	– ಸರಿ ಗಾರಿ	ಸ ಧ ಪಾ –
ಸ – ನ್ನು ತ	ಚ ರಿ ತ ನೇ	– ಕಅ ಆ ವು	ದೊ ಒ ಓ –
ಗಾ – ಗ ರಿ	ಗ ಪ ಧ ಸ	ಪಧ ಸಾ ಸಾ ಪಧ	ಸಾ ಧಪ ಗರಿ ಸಾ ‖
ಮು – ನ್ನು ಡಿ	ನೆ ನೆ ಯು ವೆ	ಖಅ ಲ ಎ ಭಅ	ಅಂ ಜಅ ನಅ ಅ ‖

೨. ರಾಗ—ಭೂಪ. ತ್ರಿತಾಳ.

ನಮಿಪೆವು ಗುರುವರ ಪ್ರೇಮಾಶಿಖರಾ । ಅಮರ ವಿನುತ ಗುಣಗಣ ಮಹಾಸಾರ ॥ ಭವಭಯ ವಿನಾಶ ಶಿವ ಪ್ರಿಯಾ ತೋಷ । ಕವನ ರಚಿಸೆ ಮತಿ ಜವದಿ ನೀಡುನೀ ॥ ೧ ॥

೦	—	÷	—
ಸ ರಿ ಗ ರಿ ನ ಮಿ ಪೆ ವು	ಸ ಧ ಪ಼ ಪ಼ ಗು ರು ವ ರ	ಧಾ – ಸಾ – ಪ್ರೇ – ಮಾ –	ರಿ ಗ ಸಾ – ಶಿ ಖ ರಾ –
ಧ಼ ಸ ರಿ ಧ಼ ಅ ಮ ರ ವಿ	ಸ ರಿ ಗ ರಿ ನು ತ ಗು ಣ	ಗ ಪ ಗ ರೇ ಗ ಣ ಮ ಹಾ	– ಸಾ – ಧ಼ – ಸಾ – ರ
ಗ ರಿ ಗ ರಿ ಭ ವ ಭ ಯ	ಗ ಪಾ – ಪ ವಿ ನಾ – ಶ	ಗ ಪ ಧ ಪಾ ಶಿ ವ ಪ್ರಿ ಯಾ	– ಗ ರಿ ಸ – ತೋ ಒ ಷ
ಗ ಪ ಧ ಸ ಕ ವ ನ ರ	ಧ ಪ ಗ ಪ ಚಿ ಸ ಮ ತಿ	ಧ ಧ ಪ ಗ ಜ ವ ದಿ ನಿ	ರಿ ಗ ಸಾ – ಇ ಡು ನೀ –

೩. ರಾಗ—ಭೂಪ. ತ್ರಿತಾಳ.

ಗುರುವರ ಕರುಣವದೋರುತೆ ಪೊರೆವಾ । ಪ್ರೇಮದಿ ಭಜಿಸುವರಾ ॥ ಘೋರತರವೆನಿಪ ಭವದೊಳಗಿಹರಾ । ಪಾರ ಗೈಯುವಾ ಸುಗುಣಾ ನಿಕರಾ । ಪ್ರೇಮದಿ ಭಜಿಸುವರಾ ॥ ೧ ॥

೦	—	+	—
ಧ ಸ ಧ ಪ ಗು ರು ವ ರ	ಗ ರಿ ಸ ರಿ ಕ ರು ಣ ವ	ಧಾ – ಸ ರಿ ದೋ – ರು ತೆ	ಗ ಪ ಗಾ – ಪೊ ರೆ ವಾ –
ಗಾ – ಗ ರಿ ಪ್ರೇ – ಮ ದಿ	ಗ ಪ ಧ ಸ ಭ ಜಿ ಸು ವ	ಪಧ ಸ ಪಧ ಸ ರಅ ಅ ಅಅ ಅ	ಪಧ ಸದ ಪಗ ರಿಸ ಅಅ ಅಅ ಅಅ ಅಅ ‖
ಗಾ – ಗ ಗ ಘೋ – ರ ತ	ಪ ಪ ಧಪ ಧ ರ ವೆ ನಿ ಪ	ಸ ಸ ಸ ಸ ಭ ವ ದೊ ಳ	ಧ ರಿ ಸಾ – ಗಿ ಹ ರಾ –
ಧಾ – ಧ ಸಾ ಪಾ – ರ ಗೈ	– ಸ ರೇ – – ಯು ವಾ –	ಸ ಗ ರೇ – ಸು ಗು ಣಾ –	ಸ ಧ ಪಾ – ನಿ ಕ ರಾ –

ಗಾ - ಗ ರಿ	ಗ ಪ ಧ ಸ	ಪಧ ಸರಿ ಗರಿ ಸಧ	ಸರಿ ಧಪ ಗರಿ ಸರಿ
ಪ್ರೇ - ಮ ದಿ	ಭ ಜಿ ಸು ವ	ರಅ ಅಅ ಅಅ ಅಅ	ಅಅ ಅಅ ಅಅ ಅಅ

೪. ರಾಗ—ಭೀಂಪಲಾಸ. ತ್ರಿತಾಳ.

ಇದು ಔಡವ–ಸಂಪೂರ್ಣ ವರ್ಗಕ್ಕೆ ಸೇರಿದುದಾಗಿದೆ. ಇದರ ಆರೋಹದಲ್ಲಿ ರಿ, ಧ ವರ್ಜ್ಯ ಸ್ವರಗಳು. ಅವರೋಹದಲ್ಲಿ ಎಲ್ಲಾ ಸ್ವರಗಳೂ ಇವೆ. ಇದರಲ್ಲಿ ಗ ಮತ್ತು ನಿ ಕೋಮಲ ಸ್ವರಗಳು ಅಲ್ಲದೆ ಬಾಕಿ ಎಲ್ಲ ಶುದ್ಧ ಸ್ವರಗಳು. ಕೆಲವರು ಧೈ ವನ್ನು ಕೋಮಲವನ್ನಾಗಿ ಎಣಿಸುತ್ತಾರೆ. ಈ ರಾಗವನ್ನು ಉತ್ತರ ದಿನದ ನಾಲ್ಕು ಘಂಟೆಯ ವರೆಗೆ ಹಾಡಬಹುದು.

ಆರೋಹ: ಸ ಗ ಮ ಪ ನಿ ಸಾ । **ಅವರೋಹ:** ಸಾ ನಿ ಧ ಪ ಮ ಗ ರಿ ಸಾ ॥

ಭೂಷಣ ಸಂಸಾರ ಬಯಲಾ । ಭ್ರಾಂತೀ ನಿಜವಿದು ಜೀವನವಾಲಾ ॥ ಮೋಹಕ ಭಾವನವಾಗಿ ಭುವಿಯಾ ॥ ಮಾಯ ಭಾವದೊಳು ಮೋಹಿಸಿ ಕೆಡುವಾ ॥ ೧ ॥

೦	—	÷	—
ಗಾ - ರಿ ಸ	ನಿ ಸ ಗ ಮ	ಪಾ - - ಮ	ಪ ನಿ ಧ ಪ
ಭೂ - ಷ ಣ	ಸ ಅಂ ಸ ಅ	ರಾ - - ಅ	ಬ ಯ ಲ ಅ

ಮ ಪ ಸಾ –	ಸ಼ ಧ ಮ ಪ	ಮಪ ಸೇ ಧ ಪ	ಗಾ – ರಿ ಸ
ಭ್ರ ಆಂ ತೀ –	ಸಿ ಜ ವಿ ದು	ಜಿಇ ಈ ವ ಸ	ಮಾ – ಲಿ ಅ
ಮ ಪ ಸಾ –	ಸ಼ ಧ ಮ ಪ	ಪ ರಿ ಸಾ –	ಸ಼ ಧ ಮ ಪ
ಭ್ರ ಆಂ ತೀ –	ಸಿ ಜ ವಿ ದು	ಪ್ರ ಆಂ ತೀ –	ಸಿ ಜ ವಿ ದು
ಸೀ – ಸಾ –	ಸ಼ ಧ ಮ ಪ	ಮಪ ಸೇ ಧ ಪ	ಗಾ – ರಿ ಸ
ಭ್ರಾಂ – ತೀ –	ಸಿ ಜ ವಿ ದು	ಜಿಇ ಈ ವ ಸ	ಮಾ – ಲಿ ಅ
ಪಾ – ಗ ಮ	ಪ ಸ಼ ಸ ಸಾ	– ಪಸ಼ ಸರಿ ರಿ	ಸ಼ ಪ ಸಾ –
ಮೋ – ಹ ಕ	ಭ ಅ ವ ನಾ	– ಪಅ ಅಅ ಗಿ	ಭು ವಿ ಯಾ –
ಪಸ಼ ಸರಿ ಸ ಸೇ	– ಧ ಮ ಪ	ಮಪ ಸೇ ಧ ಪ	ಗಗ ರಿ ಸ
ಮಅ ಅಅ ಯ ಭಾ	– ವ ದೂ ಳು	ಮೊ ಒ ಓ ಹಿ ಸಿ	ಕೆ ಡು ವ ಲಿ

೫. ರಾಗ—ಭೀಂಪಲಾಸ. ಝುಪತಾಳ.

ದೇಶಸೇವಾ ಸುದಿನ । ಜನರ ಮನ ಭಾವನಾ । ಮಾತೆ ಭುವಿಯ ವರಸೇವೆ । ಗೈವಾದಿನಾ ॥ ಮನಶಾಂತಿ ಯನು ತೋರಿ । ಘನತೋಷವಾ ಬೀರಿ ॥ ಕೀರ್ತಿಯಾ ನಿಜದಾರಿ ಅನುಕರಿಸೆ ಈ ಪರಿ ॥ ೧ ॥

÷	—	○	—
ಪ ಮ ದೆ ಎ	ಪ ಗ ಸ ಶ ಸೆ ಎ	ಮಾ – ವಾ –	ಗ ರಿ ಸ ಸು ದಿ ನ
ರಿ ನಿ ಜ ನ	ಸ ಧ ನಿ ರ ಮ ನ	ಸ ಗರಿ ಭ ಅಅ	ಸ ಧಸ ಗಮ ವ ನಅ ಅಅ
ಪಾ ಪ ಮಾ ತೆ	ನಿ ಧ ಪ ಭು ಏ ಯ	ಮ ಪ ವ ರ	ಗ ಮ ಮ ಸೆ ಎ ವೆ
ನಿ ಸ ಗೈ ಇ	ಗ ರಿ ಸ ವ ಅ ದಿ	ನಿಸ ಗಮ ಗನ ಅಅ	ಪಮ ಗಸ ಗಮ ಅಅ ಅಅ ಅಅ

ಪ ಪ	ಗಾ – ಮ	ಪ ನಿ	ಸಾ – ಸ
ಮ ನ	ಶಾಂ – ತಿ	ಯ ನು	ತೋ – ರಿ
ನಿ ಧ	ಪನಿ ಸರಿ ಸ	ನೀ –	ಧಾ – ಪ
ಘ ನ	ತೊಒ ಒಒ ಷ	ವಾ –	ಜೀ – ರಿ
ಮಾ –	ಪ ನಿ ಸ	ರಿ ನಿ	ಸಾ – ಸ
ಕೀ –	ರ್ತಿ ಯ ಅ	ನಿ ಜ	ದಾ – ರಿ
ನಿ ಧ	ಪ ಮ ಪ	ಗಾ –	ಸ ನಿಸ ಗಮ
ಅ ನು	ಕ ರಿ ಸೆ	ಈ –	ಪ ರಿಇ ಇಇ

*

೬. ರಾಗ—ಭೀಂಪಲಾಸ. ತ್ರಿತಾಳ.

ಪಾಲಿಸು ಭಾರತವಮಾತೆ ಸುಜನರಾ । ಬಾಲರಮನವಾ ಕರುಣಕೃಪಾವರ ॥ ಶೋಭಿಸುತಿರಲೀ ಧೀರ ರಾಗುತಾ । ತ್ಯಾಗಮೂರ್ತಿಗಳು ರಾರಾಜಿಸುತಾ ॥

○	—	×	—
ನೀ – ಧ ಪ ಪಾ – ಲಿ ಸು	ಗಾ – ರಿ ಸ ಭಾ – ರ ತ	ರೇ – ನಿ ಸ ಮಾ – ತೆ ಸು	ಗ ರಿ ಸಾ – ಜ ನ ರಾ –
ಪಾ – ಪ ಪ ಬಾ – ಲ ರ	ಮ ಪ ಗ ಮ ಮ ನ ವ ಅ	ಪ ನಿ ಧ ಪ ಕ ರು ಣ ಕೃ	ಗಾ – ರಿ ಸ ಪಾ – ವ ರ
ಮಪ ನೀ ಧ ಪ ಪಅ ಆ ಲಿ ಸು	ಗಾ – ರಿ ಸ ಭಾ – ರ ತ	ರೇ – ನಿ ಸ ಮಾ – ತೆ ಸು	ಪ ನಿ ಸಾ – ಜ ನ ರಾ –
ಪಾ – ಪ ಪ ಶೋ – ಭಿ ಸು	ಮ ಪ ಗ ಮ ತಿ ರ ಲಿ ಇ	ಪ ನಿ ಪ ಸಾ ಧಿ ಇ ರ ರಾ	– ಸ ಸಾ – – ಗು ತಾ –

ಸ ಸ ಸ ಗ	ರೆ ಗ ಸ ಸ	ಸ ಸ ಸ ಧ	ಪ ಮ ಪಾ –
ತ್ಯ ಅ ಗ ಮು	ಉ ತ್ತಿ ೯ ಯ ರು	ರ ಅ ರ ಅ	ಜಿ ಸು ತಾ –
ಸ ಸ ಗ ಮ	ಗ ರೆ ಸ ಸ	ಸೀ – ಸೀ –	ಧ ಸ ಪಾ –
ತ್ಯ ಅ ಗ ಮು	ಉ ತ್ತಿ೯ ಯ ರು	ರಾ – ರಾ –	ಜಿ ಸು ತಾ –

ರಾಗ—ಯಮುನ

ಇದು ಸಂಪೂರ್ಣ ವರ್ಗದ ರಾಗವು. ಇದರಲ್ಲಿ ಮಧ್ಯಮವು ತೀವ್ರಸ್ವರವಲ್ಲದೆ ಬಾಕಿ ಎಲ್ಲಾ ಶುದ್ಧ ಸ್ವರಗಳು. ಇದರ ವಾದಿ ಸಂವಾದಿಗಳನುಕ್ರಮವಾಗಿ ಗ ಮತ್ತು ನಿ ಆಗಿರುತ್ತವೆ. ಇದರಲ್ಲಿ ಶುದ್ಧ ಮಧ್ಯಮವನ್ನು "ಗಮಗ" ಹೀಗೆ ತೆಗೆದುಕೊಂಡರೆ ಯಮುನಕಲ್ಯಾಣವೆಂಬ ಉಪರಾಗವಾಗುವುದು; ಅಲ್ಲದೆ ಕೆಲವರು ಯಮುನದಲ್ಲೇ ಆರೋಹದಲ್ಲಿ ತೀವ್ರ ಅವರೋಹದಲ್ಲಿ ಶುದ್ಧ ಹೀಗೆ ಎರಡು ಮಧ್ಯಮಗಳನ್ನು ಸೇರಿಸುತ್ತಾರೆ. ಈ ರಾಗವನ್ನು ರಾತ್ರಿ ಒಂಭತ್ತು ಘಂಟೆಯ ವರೆಗೆ ಹಾಡಬಹುದು.

೭. ರಾಗ—ಯಮುನ. ಚೌತಾಳ.

ಆರೋಹ:— ಸ ರಿ ಗ ಮಿ ಪ ಧ ನಿ ಸ ।

ಅವರೋಹ:— ಸ ನಿ ಧ ಪ ಮಿ ಗ ರಿ ಸ ॥

ಪಾಹಿಶಾಂತಭುವನೇಶ್ವರ ಸುಮನೋಹರ ಭುವನಸಾರ ॥
ಪಾಪಹಾರ ಆನಂದಸಾರ ವಿಕರದೂರ ಭವಸಂಹಾರ ॥
ಗೌರೀನಾಥ ಶಿವಪಾವನ । ನಿತ್ಯಜ್ಞಾನ ಪರಿಶೋಭನ ।
ದೇವದೇವ ಅಘನಾಶನ । ಶಮದಮವಿಭೊ ಸೌಖ್ಯಸಾರ ॥ ೧ ॥

÷	೦	—	೦	—	—
ಗಾ – ಪಾ –	ಗ ಗಾ ಹಿ ಶಾಂ	– ಗ – ತ	ಗ ಗ ಭು ವ	ಗಾ – ನೇ –	ಗ ಗ ಶ್ವ ರ
ರಿ ಗ ಸು ಮ	ನಿಧ ನಿಧ ನೋಓ ಓಓ	ಪಮ ಪಾ ಹಅ ರ	ಗ ಮ ಭು ವ	ರಿ ನಿ ನ ಸಾ	ರಿ ಸ ಅ ರ
ನೀ – ಪಾ –	ಧ ನಿ ಪ ಹಾ	ರಿ ಸ ಅ ರ	ನಿ ಸ ಆ ನಂ	ಧ ಮ ದ ಸಾ	ಧ ಪ ಅ ರ
ಪ ನಿ ವಿ ಕ	ಧ ಮ ರ ದೂ	ಧ ಪ ಉ ರ	ಗ ಮ ಭ ವ	ರಿ ನಿ ಸಂ ಹಾ	ರಿ ಸ ಅ ರ

ಪ ಸಾ ಗೌ ರೀ	– ಸಾ – ನಾ	– ಸ – ಥ	ನಿ ಧ ಶಿ ವ	ನಿ ರಿ ಪ ಅ	ಸ ಸ ವ ನ
ಸೀ – ನಿ –	ಧ ನಿ ತ್ರಿ ಜ್ಞಾ	ಸ ರಿ ಅ ನ	ನಿ ಸ ಪ ರಿ	(ನಿಧ) (ನಿಧ) ಶೋ ಒ ಒ ಒ	(ಪಮ) ಪ ಭ ಅ ನ
ಗಾ – ದೇ –	ಗ ಗಾ ವ ದೇ	– ಗ – ವ	ನಿ ಪ ಅ ಘ	ಗ ರಿ ನಾ ಅ	ನಿ ಸ ಶ ನ
ನಿ ಧ ಶ ಮ	ಪ ಮ ಧ ಮ	ಧ ಪ ವಿ ಭೊ	ಗ ಮ ಸೌ ಖ	ರಿ ಸಿ ಖ್ಯ ಸ	ರಿ ಸ ಅ ರ

೮. ರಾಗ—ಯಮುನ. ತಾಳ—ಎಕ್ಕಾ.

ಸಖನೇ ಮಮಜನ್ಮ ಭೂಮಿ । ಭಾಗ್ಯೋದಯವೆಂತು ಕಾಣೆ ॥
ಸೌಖ್ಯೋದಯ ಕಾಲವೆಂತು । ಮೂಃಶೋಭಿಸುವದೊ ಕಾಣೆ ॥
ಅನಿತ ದುಃಖ ಭೋಗಿಪಾ । ಭರತ ಜನರ ದೀನವಾಣಿ ॥
ನಾದ ಕೇಳಿಸುವದೊ ಮನಕೆ । ಭರನಿ ಪೊರೆಯೊ ಗಿರಿಜನಾಥ ॥ ೧ ॥

+	○	—	○	—	—
ಗ ರಿ ಸ ಖಿ	ಗಾ — ನೇ —	ಪ ಮಿ ಮ ಮ	(ಗಮಿ) (ಪಧ) ಜಲಿ ಅಲಿ	(ಪಮಿ) (ಗರಿ) ಸ್ಮೃತಿ ಭುಉ	(ಸನಿ) ಸಾ ಉಉ ಮಿ
ಪಾ — ಭಾ —	ಪಾ — ಗ್ಯೋ —	ಪ ಮಿ ದ ಯ	(ಗಮಿ) (ಪಧ) ವೆಎ ಎಎಂ	(ಪಮಿ) ಗಾ ತುಉ ಕಾ	ರಿ ಗ ಅ ಣೆ
ಗಾ — ಸೌ —	ಮಿಾ — ಖ್ಯೋ —	ಧ ಧ ದ ಯ	(ಮಿಧ) ಸೀ ಕಅ ಅ	ಧ ಮ ಲ ವೆ	ಧ ಪ ಎಂ ತು
ಪಾ — ವುೂ —	ಪ ಪಾ ಡಿ ಶೋ	— ಮಿ -- ಭಿ	(ಗಮಿ) (ಪಧ) ಸುಉ ವಅ	(ಪಮಿ) (ಗರಿ) ದೊಒ ಕಅ	(ಸನಿ) ಸಾ ಅಅ ಣೆ
ಗ ಗ ಅ ಮಿ	ಗ ಮಿ ತ ದು	ಧ (ಮಿಧ) ಉ ಖಅ	ಸಾ — ಭೋ —	ಸ ರಿ ಗಿ ಪಾ	ಸಾ — ಆ —

ನಿ ನಿ ಭ ರ	ನಿ ನಿ ತ ಜ	ನಿ ಧ ನ ರ	ಮಿಧ ನೀ ದಿಇ ಈ	ಧ ಮಿ ನ ವಾ	ಧ ಪ ಅ ಣಿ
ಗಾ — ಸಾ —	ಗ ಮಿ ದ ಕೆ	ಧ ಧ ಎ ಳಿ	ಮಿಧ ನೀ ಸುಉ ವ	ಧ ಮಿ ದೊ ಮ	ಧ ಪ ಸ ಕೆ
ಪ ಪ ಭ ರ	ಪ ಪ ದಿ ಪೊ	ಪ ಮಿ ರೆ ಯೊ	ಗಮಿ ಪಧ ಗಿಇ ರಿಇ	ಪಮಿ ಗರಿ ಜಅ ನಅ	ಸನಿ ಸಾ ಅಅ ಥ

೯. ರಾಗ—ಯಮನ. ತ್ರಿತಾಳ.

ಲೀಲಾಮಯವು ಜಗವಿದು । ಬಲು ॥
ಕಾಲಕಠಿಣ ನಿಜ ಬಲಕಲಿ ಮಹಿಮೆಯು ॥
ಮೋಸ ತೋರುವರು ದೋಷ ಕೊಡುವರೂ ॥
ಸಾತ್ವಿಕರೊಳು ಬಲು ಭೀಕರ ದುರುಳರು ॥ ೧ ॥

○	—	÷	—
ಗಮಿ ಪಧ ಪಾ ಮಿ ಲಿಇ ಇಇ ಲಾ ಅ	ಗ ರಿ ನಿ ಸ ಮ ಯ ವು ಉ	ಗ ರಿ ಪಮಿ ಗಾ ಜ ಗ ವಿಇ ದೂ	— — ಪ ಪ — — ಬ ಲು

ಗ ಪ ಗ ಪ ಕ ಅ ಲ ಕ	ಮ ಧ ಮಿ ಪ ರಿ ಣ ಸಿ ಜ	ನಿ ಧ ಮಿ ಪ ಬ ಲ ಕ ಲಿ	ಗ ರಿ ನಿ̣ ಸ ಮ ಹಿ ಮೆ ಯು
ಗಮಿ ನಿಧ ಪಾ ಮ ಅಇ ಇಇ ಲಾ ಅ	ಗ ರಿ ನಿ̣ ಸ ಮ ಯ ವು ಉ	ಗ ರಿ ಪಮಿ ಗಾ ಜ ಗ ವಿಇ ದೂ	— — ಪ ಪ — — ಬ ಲು
ಗ ಪ ಗ ಪ ಕ ಅ ಲ ಕ	ಮಿ ಧ ಮಿ ಪ ರಿ ಣ ಸಿ ಜ	ನಿಧ ನಿಧ ಪಮಿ ಪಮಿ ಬಅ ಲಅ ಕಅ ಲಿಇ	ಗರಿ ಗರಿ ಸನಿ̣ ಸ ಮಅ ಹಿಇ ಮೆಎ ಯು
ಪಾ — ಪ ಪಾ ಮೋ — ಸ ತೋ	— ಪ ನಿ ಧ — ರು ವ ರು	ಸ̇ಾ — ಸ̇ ಸ̇ ದೋ – ಷ ಕೊ	ನಿ ರಿ̇ ಸ̇ಾ — ಡು ವ ರೂ —
ಸ̇ ರಿ̇ ಗ̇ ರಿ̇ ಸ ಅ ತ್ತಿ ಕ	ಸ̇ ನಿ ಮಿ ಪ ರೊ ಳು ಬ ಲು	ನಿ ಧ ಮಿ ಪ ಭಿ ಇ ಕ ರ	ಗ ರಿ ನಿ̣ ಸ ದು ರು ಳ ರು
ಗ̇ ರಿ̇ ಸ̇ ರಿ̇ ಸ ಅ ತ್ತಿ ಕ	ಸ̇ ನಿ ಮಿ ಪ ರೊ ಳು ಬ ಲು	ನಿಧ ನಿಧ ಪಮಿ ಪಮಿ ಭಿಇ ಇಇ ಕಅ ರಅ	ಗರಿ ಗರಿ ಸನಿ̣ ಸ ದುಉ ರುಉ ಳಅ ರು

ಗಷ್ರಿ ಧಸಿ ರೆಸ ಸಿಧ	ಪಷ್ರಿ ಗರಿ ಸನಿ ಸಾ	ಗ ರಿ ಪಷ್ರಿ ಗಾ	— — ಪ ಪ
ಲಿಇ ಇಇ ಲಅ ಅಅ	ಮಅ ಯಅ ವುಉ ಉ	ಜ ಗ ವಿಇ ದೂ	— — ಬ ಲು

ರಾಗ—ಭೈರವಿ

ಇದು ಸಂಪೂರ್ಣ ವರ್ಗದ ರಾಗವಾಗಿದೆ. ಇದರಲ್ಲಿ ರೆ ಗ ಧೈ ನಿ ಕೋಮಲ ಸ್ವರಗಳೂ ಮ ಶುದ್ಧ ಸ್ವರವೂ ಬರುತ್ತವೆ. ಇದಕ್ಕೆ ಧೈ ವಾ ದಿ ಗ ಸಂವಾದಿಯಾಗಿರುತ್ತವೆ. ಇದೇ ರಾಗದಲ್ಲಿ, ಆರೋಹದಲ್ಲಿ ಶುದ್ಧ ಅವರೋಹದಲ್ಲಿ ಕೋಮಲ ಋಷಭವನ್ನು ತೆಗೆದುಕೊಂಡರೆ ಸಿಂಧು ಭೈರವಿ ಎಂಬ ಉಪರಾಗವಾಗುವುದು. ಆದರೆ ವಾಡಿಕೆಯಲ್ಲಿ ಭೈರವಿಗೂ ಶುದ್ಧ ಋಷಭವನ್ನು ತೆಗೆದುಕೊಳ್ಳಬೇಕಾಗುತ್ತದೆ. ಭೈರವಿ ರಾಗವು ಬೆಳಿಗ್ಗೆ ಒಂಭತ್ತು ತಾಸಿನ ವರೆಗೆ ಹಾಡಲ್ಪಡುವುದು

ಆರೋಹ:— ಸ ರಿ ಗ ಮ ಪ ಧೈ ನಿ ಸ ।

ಅವರೋಹ:— ಸ ನಿ ಧೈ ಪ ಮ ಗ ರೆ ॥

೧೦. ರಾಗ—ಭೈರವಿ. ತ್ರಿತಾಲ.

ಅತುಲ ಗುಣತಿಲಕ ಪಾಲಿಸೋ ಮಮ ॥
ದೇವಾ ಪೊರೆಯೋ ಕರುಣಾಕರಹೇ ॥
ಪರಮಗುರೋ ಮಮ ಒಡೆಯುವೆ ರಾಮಾ ॥
ಥರವೆ ಮರೆವುದ್ಯೆ ಬಾಲನ ಪ್ರೇಮಾ ॥

○	—	÷	—
ಪ ಮ ಗ ರಿ	ಸ ರಿ ನಿ ಸ	ಮಾ — — ಮ	ಗಮ ಪಧ ಪ ಮ
ಅ ತು ಲ ಗು	ಣ ತಿ ಲ ಕ	ಪಾ — — ಲಿ	ಸೊಬ ಗಿಬ ಮ ಮ
ಪಾ — ಪಾ —	ಪ ಧ ಪಾ —	ಮ ಧ ಧಾ —	ಪ ಧ ಮಾ —
ದೇ — ವಾ —	ಪ್ರೊ ರಿ ಯೋ —	ಕ ರು ಣಾ —	ಧ ರ ಹೇ —
ರಿ ಗ ಮ ರಿ	ಸ ರಿ ನಿ ಸ	ಮಾ — — ಮ	ಸಗ ಮಧ ಪ ಮ
ಅ ತು ಲ ಗು	ಣ ತಿ ಲ ಕ	ಪಾ — — ಲಿ	ಸೊಬ ಗಿಬ ಮ ಮ
ಗ ಮ ಧ ನಿ	ಸಾ — ಸ ಸ	ಧ ನಿ ಗ ಸ	ಧಾ — ಪಾ —
ಪ ರ ಮ ಗು	ರೋ — ಮ ಮ	ಒ ರಿ ಯು ವೆ	ರಾ — ಮಾ
ಗ ಪ ಪ ಪ	ಪ ಧ ಮ ಪ	ಗಮ ಪಧ ನೀ ಧ	ಪ ಧ ಮಾ —
ಥ ರ ವ ಮ	ರಿ ವೃ ದ್ಧಿ ಇ	ಒಲಿ ಅಲಿ ಲ ನ	ಪ್ರಿ ಎ ಮಾ —

೧೧. ರಾಗ—ಭೈರವಿ. ತಾಲ—ದಾದರಾ.

ಪಾಹಿ ಪಾಹಿ ಮಾಯಾಮಯ ದೇಹಿಪುಣ್ಯಕಾಯಾ ॥
ನೀಗಿ ಮೋಹಮಾಯ ಭಯಾ । ಭೋಗಿತಲ್ಪತವ ಸೇವೆಯ ॥
ಸದಾಮುಹಾ ಹರುಷಸದಯ । ಕರುಣಿಸೈ ಸುಶ್ರೀಯಾ ॥ ೧ ॥

÷	—	೦	÷	—	೦
ಪಾ —	ಪ ಪಾ	— ಪ	ಪ ಧ	ಪ ಮ	ಗ ಮ
ಪಾ —	ಹಿ ಪಾ	— ಹಿ	ಮಾ ಅ	ಯ ಅ	ಮ ಯ
ಪ ನಿ	ಧ ಪಾ	— ಮ	ಗಮ ಪಧ	ಮಪ ಧಪ	ಮಗ ರಿಸ
ದೆ ಎ	ಹಿ ಪು	— ಣ್ಯ	ಕಅ ಅಅ	ಯಅ ಅಅ	ಅಅ ಅಅ
ಧಾ —	ಮ ಧಾ	— ನಿ	ಸಾ —	ನಿ ಧನಿ	ಸರಿ ಸ
ನೀ —	ಗಿ ಮೋ	-- ಹ	ಮಾ —	ಯ ಭಅ	ಯಅ ಆ
ನೀ —	ನಿ ಸಾ	— ಸ	ಸ ರಿ	ಸ ನಿ	ಧ ಪ
ಭೋ —	ಗಿ ತ	— ಲ್ಪ	ತ ವ	ಸೆ ಎ	ವೆ ಯ

ಗ ಪಾ	— ಪ	ಪಾ —	ಪ ಧ	ಮ ಪ	ಗ ಮ
ಸ ದಾ	- ಮ	ಹಾ —	ಹ ರು	ಷ ಸ	ದ ಯ

ಪ ಸ	ಧ ಪಾ	— ಮ	(ಗಮ) (ಪಧ)	(ಸಸ) (ಧಪ)	(ಮಗ) (ರಿಸ)
ಕ ರು	ಣೆ ಸ್ಯೆ	— ಸು	ಶ್ರೀಎ ಎಎ	ಯಅ ಅಅ	ಅಅ ಅಅ

೧೨. ರಾಗ - ಭೈರವಿ. ತ್ರಿತಾಲ.

ದುರದೆಸೆಗಿದು ಸಮಯಾ ಸಮಯಾ । ದೊರಕಿದು ಪರರಾ ಭಾಷೆಯ ಸಾರ ॥
ಪಾರತಂತ್ರದಾ ಬಂಧನಪಾರ ॥
ಪರಮಾಲಿಗೆ ಮನಮೋಹಿಸಿಧನವಾ । ಪರಿ ಪರಿ ತೆರದೊಳ್ ತೊರೆಯುತೆ ತನುವಾ ॥
ಘಾತಿಸೀ ಪರರೊಳು ಸುಖಿವಾ ॥ ೧ ॥

○	—	÷	—
ಸ ಸ ರಿ ಸ	ಸ ಧ ಪ ಧ	ಸಾ — — —	ಸ ಧ ಪಾ —
ದು ರ ದೆ ಸೆ	ಗಿ ದು ಸ ಮ	ಯಾ — — —	ಸ ಮ ಯಾ —

ಮ ಪ ಧ ನಿ	ಧ ಪ ಗಾ —	ಮಪ ಧಾ ಪ ಮ	ರೀ — ಸಾ —
ದೊ ರ ಕಿ ತು	ಪ ರ ರಾ —	ಭಅ ಅ ಷೆ ಯ	ಸಾ — ರಾ —
ನೀ — ಸ ಗಾ	— ಮ ಮಾ —	ಗ ಮ ಧ ನಿ	ಸ ಧ ನೀ —
ಪಾ — ರ ತಂ	— ತ್ರ ದಾ —	ಒ ಅಂ ಧ ನ	ಪ ಅ ರಾ —
ಸ ಗ ರ ಗ	ಸ ನಿ ಧಾ —	ಗ ಮ ಧ ನಿ	ಸ ಧ ನೀ —
ಬ ಅಂ ಧ ನ	ಪ ಅ ರಾ —	ಬ ಅಂ ಧ ನ	ಪ ಅ ರಾ —
ರೀ — ರ ರ	ರೀ — ನೀ —	ಸ ರ ಸ ನಿ	ಧ ನಿ ಸಾ —
ಬಂ — ಧ ನ	ಪಾ . ರಾ —	ಬ ಅಂ ಧ ನ	ಪ ಅ ರಾ —
ಸಗ ರಸ ನರಿ ಸನಿ	ಧ ಪ ಪ ಧ	ಸಾ — — —	ನಿ ಧ ಪಾ —
ದುಉ ರಅ ದೆಏ ಸಏ	ಗಿ ದು ಸ ಮ	ಯಾ — — —	ಸ ಮ ಯಾ —
ಮ ಪ ಧ ನಿ	ಧ ಪ ಗಾ —	ಸಗ ಮಧ ಪ ಮ	ರೀ — ಸಾ —
ದೊ ರ ಕಿ ತು	ಪ ರ ರಾ —	ಭಅ ಅಅ ಷೆ ಯ	ಸಾ — ರಾ —

ಧ ಧ ಧಾ — ಪ ರ ಮಾ —	ಧ ಮ ಧ ನಿ ಅ ಗೆ ಮ ನ	ಸಾ — ಸ ನಿ ಮೋ — ಹಿ ಸಿ	ಸ ರೆ ಸಾ — ಧ ನ ವಾ —
ಸ ಗೆ ರೆ ಗೆ ಪ ರಿ ಪ ರಿ	ಸ ರೆ ಸರೆ ಗಮ ತೆ ರ ದೊಲ ಒಳ್	ಸ ರೆ ಸ ನಿ ತೊ ರೆ ಯು ತೆ	ಧ ನಿ ಸಾ — ತ ನು ವಾ —
ಗಾ — — — ಘಾ — — —	ಸಗೆ ಸನಿ ಧಾ — ತಿಇ ಇಇ ಸೀ —	ಗ ಮ ಧ ನಿ ಪ ರ ರೊ ಳು	ಸ ಧ ನೀ — ಸು ಖ ವಾ —

ರಾಗ—ಜೀವನಪುರಿ.

ಇದು ಷಾಡವ-ಸಂಪೂರ್ಣ ವರ್ಗಕ್ಕೆ ಸೇರಿದುದಾಗಿದೆ. ಇದರ ಆರೋಹಹಲ್ಲಿ ಗ ವರ್ಜ್ಯ ಸ್ವರವು ಅವರೋಹದಲ್ಲಿ ಎಲ್ಲಾ ಸ್ವರಗಳೂ ಇವೆ. ಗ ಧ ನಿ ಕೋಮಲ, ಬಾಕಿ ಎಲ್ಲ ಶುದ್ಧ ಸ್ವರಗಳು. ಈ ರಾಗಕ್ಕೆ ಸ ವಾದಿ ಪ ಸಂವಾದಿಯಾಗಿರುತ್ತದೆ. ಕೆಲವರು ಧ ವಾದಿ, ಗ ಸಂವಾದಿ ಎಂದೂ ಹೇಳುತ್ತಾರೆ. ಇದನ್ನು ಹಾಡತಕ್ಕ ಸಮಯವು ಪ್ರಾತಃಕಾಲ ಒಂಭತ್ತು ಘಂಟೆಯ ವರೆಗೆ ಆಗಿರುತ್ತದೆ.

ಆರೋಹ:-- ಸ ರಿ ಮ ಪ ಧ ನಿ ಸಾ ।

ಅವರೋಹ:-- ಸ ನಿ ಧ ಪ ಮ ಗ ರಿ ಸ ॥

೧೩. ರಾಗ—ಜೀವನಪುರಿ. ತ್ರಿತಾಲ.

ಹೇ ಭಾರತ ವರಮಾತೇ ಜಯ ಜಯ ॥
ಪ್ರಾರ್ಥಿಸುವೇ ಅತಿಕರುಣಾಮಯ ॥
ಪಾಲಿಸು ನಿಜದೇ ಮಹಾ ಸುಖ್ಯಾತೇ ॥
ಸೇವೆಯ ಗೈಯುವ ಬಾಲಕರನುತೇ ॥೧॥

○	—	÷	—
ಸ ರಿ ಮಾ —	ಪ ಮ ಪ ಸ	ಧಾ — ಪಾ —	ಮ ಗ ರಿ ಸ
ಹೇ ಎ ಭಾ —	ರ ತ ವ ರ	ಮಾ — ತೇ —	ಜ ಯ ಜ ಯ
ಮಾ — ಮ ಮ	ರಿಮ ಪಧ ಸಧ ಪಮ	ಪ ಸ ಧ ಪ	ಗಾ — ರಿ ಸ
ಪ್ರಾ — ರ್ಥಿ ಸು	ವೆಎ ಎಎ ಎಎ ಎಎ	ಅ ತಿ ಕ ರು	ಣಾ — ಮ ಯ
ಮಾ — ಮ ಮ	ಪ ಪ ಸಧ ಪಸ	ಪ ಸಾ — ಧ	ಸಾ — ಸಾ —
ಪಾ — ಲಿ ಸು	ನಿ ಜ ದೆಎ ಎಎ	ಮ ಹಾ — ಸು	ಖ್ಯಾ — ತೇ —
ಧಸ ಸರಿ ಗಾ ರಿ	ಸ ಸ ಧ ಪ	ಸೇ — ಧ ಪ	ಮ ಗ ರಿ ಸ
ಸೆಎ ಎಎ ವೆ ಯ	ಗೈ ಇ ಯು ವ	ಬಾ — ಲ ಕ	ರ ನು ತೆ ಎ

೧೪. ರಾಗ--ಜೀವನಪುರಿ. ತ್ರಿತಾಳ.

ಪಾವನ ರಘುಕುಲ ತಿಲಿಕಾ ರಾಮಾ ॥
ನಮಿಪೆನಾ ಸದಾ । ದಯಾ ಸಾಗರಾ ॥
ವೇಗದಿಂದ ಬಾ ಮೇಘಶ್ಯಾಮಾ । ಬಾಗುವೆನಿಜದೇ ರವಿಕುಲಸೋಮಾ ॥
ನೀಗುವದೆನ್ನಯ ಭವಭಯಗಳನಾ । ಸಾಗರಶಾಯಿಯೆ ಪೊರೆಯುವದಮಾವಾ ॥ ೧ ॥

○	—	÷	—
ಪ ಸ ನಿ ಸ	ಧ ಪ ಮ ಪ	ಧ ಪ ಗರಿ ಸ	ರಿ ಮ ಪಧ ಪ
ಪ ಅ ವ ನ	ರ ಘು ಕು ಲ	ತಿ ಲ ಕಅ ಅ	ರ ಅ ಮಅ ಅ
ರಿ ಮ ಗ ರೇ	— ಗ ಸಾ —	ಸ ಗ ರಿ ಸ	ನಿ ಸ ಧ ಪ
ನ ಮಿ ಪೆ ನಾ	— ಸ ದಾ —	ದ ಯ ಅ ಸ	ಅ ಗ ರ ಅ
ಪಧ ನಿಸ ನಿ ಸ	ಧ ಪ ಮ ಪ	ಮಪ ಧಪ ಮಗ ರಿಸ	ರಿ ಮ ಪಧ ಪ
ಪಅ ಅಅ ವ ನ	ರ ಘು ಕು ಲ	ತಿಇ ಲಅ ಕಅ ಅಅ	ರ ಅ ಮಅ ಅ

ಮಾ — ಮ ಪಾ	— ಪ ಧ಼ಾ —	ಸಂ — ಸಂ —	ಪನಿ ಸರೆ ಸಾ —
ವೇ — ಗ ದಿಂ	— ದ ಬಾ —	ಮೋ — ಘ —	ಶ್ಯಾಅ ಅಅ ಮಾ —
ಪಾ — ನಿ ನಿ	ಸ ರೆ ಸರೆ ಗಂ	ರೆ ಸ ನಿ ಸ	ಧ಼ಾ — ಪಾ —
ಬಾ — ಗು ವೆ	ನಿ ಜ ದೆಎ ಏ	ರ ಏ ಕು ಲ	ಸೋ — ಮಾ —
ಮಾ — ಮ ಮ	ಪ ನಿ ಧ಼ ಪ	ಮ ಪ ಧ಼ ಪ	ಗಂ ರೆ ಸಾ —
ನೀ — ಗು ವ	ದೆ ಎ ನ್ನ ಯ	ಭ ವ ಭ ಯ	ಗ ಳ ಸಾ —
ರೇ — ಮ ಮ	ಪಾ — ನಿ ಸ	ರೆ ಗಂ ರೆ ಸ	ರೆ ನಿ ಧ ಪ
ಸಾ — ಗ ರ	ಶಾ — ಯಿ ಯೆ	ಪೊ ರೆ ಯು ವ	ದ ಮ ಮ ಅ

೧೫. ರಾಗ—ಜೀವನಪುರಿ. ತ್ರಿತಾಲ.

ವರಸುಖಸಾರೇ ಮಾತೆ ಪ್ರಿಯಕರೇ ॥
ಮೋಹಕರೇ ಅತಿನಿಜಸತಿಯೇ ॥
ಜೈ ಉದಾರೇ ಸಾರವಿಹಾರೇ । ಸಾರಸುವದನೇ ಪಾಪನಿವಾರೆ ॥
ನಾಥಳೆಪೊರೆವುದು ಭವಭಯಹಾರೆ । ಮೋಹಕರೇ ಅತಿನಿಜಸತಿಯೆ ॥ ೧ ॥

○	—	÷	—
ಪ ನಿ ಧ ಪ	ಮ ಪ ಗ ರಿ	ಗಗ ಮಪ ಮ ಗ	ರಿ ಗ ಸಾ —
ವ ರ ಸು ಖ	ಸ ಅ ರಿ ಅ	ಮಅ ಅಅ ತೆ ಪ್ರಿ	ಯ ಕ ರೇ —
ರೇ — ಮ ಮ	ಪಾ — ನಿ ಸ	ರಿ ಗ ರಿ ಸ	ರಿ ನಿ ಧ ಪ
ವೋ — ಹ ಕ	ರೇ -- ಅ ತಿ	ನಿ ಜ ಸ ತಿ	ಯೆ ಎ ಎ ಎ
ಪ ನಿ ಧ ಪ	ಮಪ ಧಪ ಮಗ ರೇ	ಗಗ ಮಪ ಧಪ ಮಗ	ರಿಮ ಗರಿ ಸನಿ ಸಾ
ವ ರ ಸು ಖ	ಸಅ ಅಅ ರಿಎ ಎಎ	ಮಅ ಅಅ ತೆಎ ಪ್ರಿಇ	ಯಅ ಕಅ ರೆಎ ಎ
ರೇ — ಮ ಮ	ಪಾ — ನಿ ಸ	ರಿ ಗ ರಿ ಸ	ಪಧ ನಿಸ ನಿಧ ಪಮ
ವೋ — ಹ ಕ	ರೇ — ಅ ತಿ	ನಿ ಜ ಸ ತಿ	ಯೆಎ ಎಎ ಎಎ ಎಎ
ಪ ನಿ ಧ ಪ	ಮ ಪ ಗ ರಿ	ಧಾ — ಪಾ ಗ	ರಿ ಗ ಸಾ —
ವ ರ ಸು ಖ	ಸ ಅ ರಿ ಎ	ಮಾ — ತೇ ಪ್ರಿ	ಯ ಕ ರೇ —

— ಮಾ — ಮ	ಪಾ — ಧೊ —	ಸೊ — ಸ ಸ	ಪನಿ ಸರೆ ಸೊ —
— ಜೈ — ಉ	ದಾ — ರೇ —	ಸಾ — ರ ಏ	ಹಅ ಅಅ ರೇ —
ಪಾ — ನಿ ನಿ	ಸ ರೆ ಸರೆ ಗೊ	ರೆ ಸ ನಿ ಸ	ಧೊ — ಪಾ —
ಸಾ — ರ ಸು	ವ ದ ನೆಏ ಏ	ಪ ಅ ಪ ಸಿ	ವಾ — ರೇ
ಮಾ — ಮ ಮ	ಪ ನಿ ಧ ಪ	ಮ ಪ ಧ ಪ	ಗೊ — ರೆ ಸ
ನಾ — ಥ ಳೆ	ಪೊ ರೆ ವು ದು	ಭ ವ ಭ ಯ	ಹಾ — ರಿ ಏ
ರೇ — ಮ ಮ	ಪಾ — ನಿ ಸ	ರೆ ಗೆ ರೆ ಸ	ಪಧ ನಿಸ ನಿಧ ಪಮ
ಮೋ — ಹ ಕ	ರೇ — ಅ ತಿ	ನಿ ಜ ಸ ತಿ	ಯೆಏ ಏಏ ಏಏ ಏಏ

ರಾಗ—ತಿಲಂಗ.

ಇದು ಔಡವ ವರ್ಗದ್ದಾಗಿದೆ. ಇದರಲ್ಲಿ ರೆ, ಧ, ವರ್ಜ್ಯ ಸ್ವರಗಳಾದರೂ ತಾರಕದಲ್ಲಿ ಋಷಭವನ್ನು ಅಲ್ಲಲ್ಲಿ ರಂಜನೆಗಾಗಿ ಉಪಯೋಗಿಸುವುದುಂಟು. ಅವರೋಹದಲ್ಲಿ ಮಾತ್ರ ಕೋಮಲನಿಷಾಧ. ಬಾಕಿ ಎಲ್ಲ ಶುದ್ಧ ಸ್ವರಗಳೇ. ಇದಕ್ಕೆ ಗ ವಾ ದಿ, ನಿ ಸಂವಾದಿಯಾಗಿರುತ್ತದೆ. ರಾತ್ರಿಯ ಎರಡನೇ ಪ್ರಹರದವರೆಗೆ ಇದನ್ನು ಹಾಡಬಹುದು.

ಆರೋಹ:— ಸ ಗ ಮ ಪ ನಿ ಸಾ̇ ॥

ಅವರೋಹ:— ಸ̇ ನಿ ಪ ಮ ಗ ಸಾ ॥

೧೬. ರಾಗ—ತಿಲಂಗ. ತ್ರಿತಾಲ.

ಸ್ಮರಹರ ಪುರಹರ ಭವ ಭಯದೂರಾ ॥
ಪರಮೇಶ್ವರ ವರಕರುಣಾಕಾರಾ ॥
ಕೈಲಾಸಧರಾ ಗಿರಿತನುಜಾವರ ॥
ಪಾವನಶಶಿಧರ ಓಂಕಾರಾ ॥ ೧ ॥

೦	—	÷	—
ಸ ಮ ಗ ಮ	ಪ ಪ ನಿ ಪ	(ಪನಿ) ಸಾ̇ ನಿ ಪ	(ಗಮ) (ಪಮ) ಗಾ —
ಸ್ಮ ರ ಹ ರ	ಪು ರ ಹ ರ	ಭಅ ವ ಭ ಯ	ದುಉ ಉಉ ರಾ —
ಪ ನಿ ಸಾ̇ —	ನಿ ಸ̇ ನಿ ಪ	ನಿ ಸ̇ ನಿ ಪ	ಮ ಮ ಗಪ ಮಗ
ಪ ರ ಮೇ —	ಶ್ವ ರ ವ ರ	ಕ ರು ಣ ಅ	ಕ ಅ ರಅ ಅಅ
ಗ ಮ (ಗಮ) (ಪನಿ)	ಸ̇ ನಿ ಸಾ̇ —	ನಿ ಸ̇ ಗ̇ ಮ̇	ಗ̇ ಸ̇ ನಿ ಸ̇
ಕೈ ಇ ಲಅ ಅಅ	ಸ ಧ ರಾ —	ಗಿ ರಿ ತ ನು	ಜ ಅ ವ ರ

ಪನಿ ಸರಿ ನಿ ಸ	ನಿ ಪ ಮ ಪ	ಗಮ ಪಸ ನಿ ಪ	ಗಮ ಪಮ ಗಾ — ‖
ಪಲಿ ಅಲಿ ವ ನ	ಶ ಶಿ ಧ ರ	ಓಓ ಓಓ ಓ ಓಂ	ಕಲಿ ಅಲಿ ರಾ — ‖

೧೭. ರಾಗ—ತಿಲಂಗ. ತಾಲ—ದಾದರ.

ಮದನಮೊಹನ ಶ್ಯಾಮಸುಂದರ ॥

ನಮಿಪೇತವ ಚರಣಪದವ । ಪೊರೆಯೋದೇವ ಮೋಹಭವಾ ಹಾರಕಜವ ॥

ಗೋಕುಲನಾಥ ಹೇಪುನೀತ । ಪರಿಪಾಲಿಸು ಶ್ರೀನಾಥ ॥

ಮಾರತಾತ ಪಾಹಿಖ್ಯಾತ । ಮುನಿಗಣಸುತನಂದಸುತಾ । ರಾಧಪ್ರೀತ ॥ ೧ ॥

÷	—	○	÷	—	○
ಪ ನಿ	ನಿ ಸ	ನಿ ಸ ‖	ನೀ —	ಪ ಮ	ಗ ಮ
ಮ ದ	ನ ಮೊ	ಹ ನ ‖	ಶ್ಯಾ —	ಮ ಸುಂ	ದ ರ
ಪ ನಿ	ಸ ರೆ	ನಿ ಸ ‖	ಪ ಸ	ನಿ ಪ	ಗ ಮ
ಮ ದ	ನ ಮೊ	ಹ ನ ‖	ಶ್ಯಾ ಅ	ಮ ಸುಂ	ದ ರ

ಮ ಗ	ಮ ಪ	ನಿ ಪ	ಸಾ —	ನಿ ಪ	ಮಾ —
ಮು ನಿ	ಗ ಣ	ಸು ತ	ನಂ —	ದ ಸು	ತಾ —
ಗಮ ಪನಿ	ಪಮ ಗ	ಸ ಸ	ಸಾ —	ಸ ಮ	ಗ ಮ
ರಅ ಅಅ	ಧಅ ಪ್ರಿ	ಇ ತ	ಶ್ಯಾ —	ಮ ಸುಂ	ದ ರ
ಪ ನಿ	ನಿ ಸ	ರೆ ಸ	ಸಾ —	— ಸಾ	— —
ಮ ದ	ನ ಮೋ	ಹ ನ	ಶ್ಯಾ —	— ಮಾ	— —

೧೮. ರಾಗ ತಿಲಂಗ. ತ್ರಿತಾಲ.

ಮಂಜೂಳ ರಸನಾ । ನಿಜದೇ ॥
ಮೂರ್ತಿಮಂತ ಸಂಗೀತ ಸಾಧನಾ ॥
ಮನೋಹರವಾಗಿ ತಾ । ರಸನೆಗೆ । ಹರುಷವಾ ಬೀರುತಾ ॥
ಮೋಹಕಾರಿ ಮಹವಿನೋದ ದಾತಾ ॥

೦	—	÷	—
ಸಾ — — ಪ	ನಿ ಪ ಮ ಗ	ಮಾ — — —	ಗ ಮ ಪನಿ ಸರೆ
ಮಂ — — ಜೂ	ಉ ಳ ರ ಸ	ನಾ — — —	ನಿ ಜ ದೆಎ ಎಎ

ಸಾ — — ಸೇ	— ಪ ಮ ಗ	ಮಾ — — —	ಗಮ ಪಮ ಗಾ —
ಮಂ — — ಜೂ	— ಳ ರ ಸ	ನಾ — — —	ನಿಇ ಜಅ ದೇ —
ಸಾ — ಸ ಗಾ	— ಮ ಪ ನಿ	ಸಾ — ನಿ ಪನಿ	ಸರೆ ಸಸ ಪಮ ಗಮ
ಮೂ — ರ್ತಿ ಮಂ	— ತ ಸ ಅಂ	ಗೀ — ತ ಸಅ	ಅಅ ಧಅ ನಅ ಅಅ
ಪ ಸೇ — ಸ	ಸ ಪನಿ ಸಾ ಸ	ಪಾ — — —	ಗಮ ಪಸ ಪಮ ಗಮ
ಮ ನೋ — ಹ	ರ ವಅ ಅ ಗಿ	ತಾ — — —	ಅಅ ಅಅ ಅಅ ಅಅ
ಪ ಸೇ — ಸ	ಸ ಪನಿ ಸಾ ನಿ	ಪಾ — — —	ಸ ಪ ಗ ಮ
ಮ ನೋ — ಹ	ರ ವಅ ಅ ಗಿ	ತಾ — — —	ರ ಸ ನೆ ಗೆ
ಮ ಗ ಮ ಪ	ನಿ ನಿ ಸ ನಿ	ಸಾ — — —	— — — —
ಹ ರು ಷ ವ	ಅ ಬಿ ಇ ರು	ತಾ — — —	— — — —
ಸಾ — ಸ ಗಾ	— ಮ ಪ ನಿ	ಸ ಸಾ — ನಿ	ಸರೆ ಸಸ ಪಮ ಗಮ
ಮೋ — ಹ ಕಾ	— ರಿ ಮ ಹ	ಏ ನೋ — ದ	ದಅ ಅಅ ತಅ ಅಅ

ರಾಗ—ಸೋಹನಿ

ಇದು ಷಾಡವ ವರ್ಗಕ್ಕೆ ಸೇರಿದುದಾಗಿದೆ. ಇದರಲ್ಲಿ ಪಂಚಮವು ವರ್ಜ್ಯ ಸ್ವರವು. ಇದರ ವಾದಿ ಸಂವಾದಿಗಳು ಅನುಕ್ರಮವಾಗಿ ಗ ಮತ್ತು ಧ ಆಗಿರುತ್ತವೆ. ರೆ ಕೋಮಲ ಮ ತೀವ್ರವಲ್ಲದೆ, ಬಾಕಿ ಎಲ್ಲ ಶುದ್ಧ ಸ್ವರಗಳು. ಉತ್ತರ ರಾತ್ರಿಯ ನಾಲ್ಕು ಘಂಟೆಯ ವರೆಗೆ ಈ ರಾಗವನ್ನು ಹಾಡಬಹುದು.

ಆರೋಹ:— ಸ ರೆ ಗ ಮ ಧ ಸಿ ಸ

ಅವರೋಹ:— ಸ ನಿ ಧ ಮ ಗ ರೆ ಸ

೧೯. ರಾಗ—ಸೋಹನಿ, ತ್ರಿತಾಲ.

ಮಹಾ ವಿಹಾರ ಶ್ರೀ ಹೀರ । ದೇವಾ ॥
ನವಮೋಹನ ಗೋಪಾಲ ಬಾಲ ನವ ॥
ಗೋಕುಲದಲಿ ತಾ ತೋರ್ಪ ಲೀಲೆಗಳ ।
ನೋಡೇ ಮುದವನು ಈವು ದಾಹಾ ॥ ೧ ॥

೦				—				÷				—			
ನಿ	ಸ	ನಿ	ಧ	ಮ	ಗ	ಮ	ಧ	ಸಾ	—	ಸ	ಸಿ	ಧ	ನಿ	ಮ	ಧ
ಮ	ಹ	ವಿ	ಹ	ಅ	ರ	ಶ್ರಿ	ಇ	ಹೀ	—	ರ	ದೆ	ಎ	ಎ	ವ	ಆ

ಮಿ ಧ ಮಿ ಧ	ನಿ ನಿ ನೀ —	ಮಿಧ ನಿಸ ನಿಧ ಮಿ	ಗ ರಿ ಸ ಸ
ನ ವ ಮೊ ಒ	ಹ ನ ಗೋ —	ಪಅ ಅಅ ಲಅ ಬ	ಅ ಲ ನ ವ
ಗಾ — ಗ ಗ	ಮಿ ಮಿ ಧಮಿ ಧ	ಸಾ — ಸ ಮಿಧ	ನಿಸ ರೀ ಸ ಸ
ಗೋ - ಕು ಲ	ದ ಲಿ ತಅ ಅ	ತೋ - ರ್ಪ ಲಿಇ	ಇಇ ಲೆ ಗ ಳ
